
ಕಲ್ಯಾಣ ಕಿರಣ

ಏಪ್ರಿಲ್-2010

ಬೆಲೆ-ರೂ.10.00





ಅಲ್ಲಮಗಿರಿಯ ಗಣಮೇಳದ ಉದ್ಘಾಟನೆ, ಸಂಸತ್ ಸದಸ್ಯ ರಾಜೂ ಶೇಟೆ ಯವರಿಂದ




ಪೂಜ್ಯ ಬಸವಕುಮಾರ ಸ್ವಾಮಿಗಳಿಂದ ಪೀಠಾರೋಹಣ



ಪೀಠಾರೋಹಣಕ್ಕೆ ಮುನ್ನ ಅಲ್ಲಮಪ್ರಭು ಜ್ಯೋತಿ ಸಂದರ್ಶನ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಸಂಪುಟ-40	ಬಸವ ಶಕೆ - 876	ಆಜೀವ ಸದಸ್ಯತ್ವ ರೂ. 1000/-
ಸಂಚಿಕೆ -4	ಏಪ್ರಿಲ್-2010	ವಾರ್ಷಿಕ ಚಂದಾ ರೂ. 100/-

ಸ್ಫೂರ್ತಿ ಗಂಗೋತ್ರಿ

ಶ್ರೀ ಅಕ್ಕಮಹಾದೇವಿ ನೀನಮ್ಮ ಮುನ್ನಡೆಸು
ಮಾತಾಯಿ ಸ್ತ್ರೀಕುಲದ ಸ್ಫೂರ್ತಿ ಗಂಗೋತ್ರಿ ॥ ಪ ॥

ಹೆಣ್ಣು ಮಾಯೆಯು ಎಂಬ ಸೊಲ್ಲುಗಳ ಮೆಟ್ಟುತ
ಕಣ್ಣು ತೆರೆಸಿದ ಮಾತೆ ವಿಖ್ಯಾತ ಚರಿತೆ ॥ ಅ.ಪ ॥

ಉಡುತಡಿಯ ಓಂಕಾರ ಝೇಂಕರಿಸಿ ಹರಿಯೆ
ಒಡಲು ತಾ ಬೆಳೆಯಿತು ಲಿಂಗಮ್ಮ ತಾಯಿಯಲಿ
ಒಡಗೂಡಿ ಸುಜ್ಞಾನ ಸಡಗರಿಸಿ ದನಿಯಿತು
ಮೃಡನ ಚೇತನ ನಿನ್ನ ನರತಂತುಗಳ ಮೀಂಟಿ ॥ 1 ॥

ಉಗಮಿಸಿದ ನಿನ್ನೊಡಲು ಸುಳಿದೆಗೆದು ಬೆಳೆಯಿತು
ಪ್ರಗತಿಯಂ ಸಾಧಿಸುತ ದಿನದಿನಕೆ ಸೊಬಗೇರಿ
ಭಕ್ತಿ-ಜ್ಞಾನದ ಸೆಲೆಯು ಹೊಮ್ಮಿ ಹರಿಯುತ್ತಿರಲು
ಚೊಕ್ಕ ವೈರಾಗ್ಯದಿಂ ಮಲ್ಲಿಕಾರ್ಜುನಗೊಲಿದೆ ॥ 2 ॥

ಸಂಕಲ್ಪದೊಳು ಮೇರು ಸೌಂದರ್ಯದೊಳು ಹಂಸೆ
ಶಿವ ಭಕ್ತಿಯಲ್ಲಿ ನೀನು ಪ್ರೇಮ ಸಾಮ್ರಾಜ್ಞಿ
ವೈರಾಗ್ಯ ಭಾವದಲ್ಲಿ ಗೌರಿಶಂಕರವಾದೆ
ಹೃದಯ ನಿನ್ನದು ಶಿವಗೆ ಮಾನಸ ಸರೋವರ ॥ 3 ॥

ಅನುಭಾವ ಮಂಟಪದ ಅಮರ ಜ್ಯೋತಿಯು ಆದೆ
ಸ್ವಾನುಭವ ಜೇನನ್ನು ವಚನ ರೂಪದಿ ಇತ್ತೆ
ಚಿಜ್ಯೋತಿ ಬಸವನ ಕಾರುಣ್ಯ ಸುತೆಯಾದೆ
ಬಸವ ಧರ್ಮದ ಕೀರ್ತಿ ದುಂದುಭಿಯ ಮೊಳಗಿದೆ ॥ 4 ॥

- ಮಾತಾಜಿ

ಅಕ್ಕನ ಅಮರವಾಣಿ

ಅರಿಯದವರೊಡನೆ ಸಂಗವ ಮಾಡಿದೊಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ ;
ಬಲ್ಲವರೊಡನೆ ಸಂಗವ ಮಾಡಿದೊಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ;
ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿಕೊಂಬಂತೆ!

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮೇ 16ರಂದು 877ನೆಯ ಬಸವ ಜಯಂತಿ

ಧರ್ಮಪಿತ, ವಿಶ್ವಗುರು ಬಸವಣ್ಣನವರ ಜಯಂತಿಯು ದಿ. 16-5-10ರಂದು ಒದಗಿ ಬಂದಿದೆ. ಅಂದು ಸರ್ಕಾರಿ ರಜಾದಿನವೂ ಅಹುದು. ಆದ್ದರಿಂದ ಅಂದೇ ಮೆರವಣಿಗೆ, ಉತ್ಸವ ಆಚರಿಸಬೇಕು.

ಕೆಲವರು ರೋಹಿಣಿ ನಕ್ಷತ್ರದ ಆಧಾರದಲ್ಲಿ ಬಸವ ಜಯಂತಿಯನ್ನು ನಿರ್ಧರಿಸಿದರೆ ಮತ್ತೆ ಕೆಲವರು, ಅಕ್ಷಯ ತೃತೀಯಾದ ಮೇಲೆ ನಿರ್ಧರಿಸುವರು. ಇದರಿಂದ ಕ್ಯಾಲೆಂಡರ್‌ಗಳು ಕೊಡುವ ದಿನದಲ್ಲಿ ವ್ಯತ್ಯಾಸ ಬರುವುದು. ಆದ್ದರಿಂದ ಶರಣ ಬಂಧುಗಳು ಸರ್ಕಾರಿ ರಜಾ ದಿನ ಇರುವ ಕಾರಣ ಮೇ 16ರಂದು ಬಸವ ಜಯಂತಿಯನ್ನು ಆಚರಿಸಬೇಕು.

ಬೆಂಗಳೂರಿನ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ಜಯಂತಿಯನ್ನು ದಿ. 16ರಂದು ಬೆಳಿಗ್ಗೆ 10-30ರಿಂದ ಆಚರಿಸಲಾಗುವುದು. ಕಾರ್ಯಕ್ರಮ ಮತ್ತು ಪ್ರಸಾದದ ನಂತರ ಮೆರವಣಿಗೆ - ಮಧ್ಯಾಹ್ನ 4 ರಿಂದ ಇರುತ್ತದೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492

ಸಂಪಾದಕೀಯ: **- ಮಾತಾಜಿ**

ಪರಸ್ಪರ ಸಹಕಾರ

ಒಂದು ದಿವಸ ಶರಣ ಸತ್ಯಾನಂದರು, ವಿಶ್ವಬಸವ ಧರ್ಮ ಮಹಾಸಭಾ ಟ್ರಸ್ಟಿನ ಸದಸ್ಯರಲ್ಲೊಬ್ಬರು, ಭೇಟಿಯಾದರು. "ಗೋವಂಶ ಹತ್ಯೆ ನಿಷೇಧ ಪರ ಹೋರಾಟದಲ್ಲಿ ತಾವು ಪೇಜಾವರ ಶ್ರೀಗಳ ಜೊತೆ ಕಾಣಿಸಿಕೊಂಡಿದ್ದು ನಮಗೆಲ್ಲ ಆಘಾತವನ್ನು ಉಂಟು ಮಾಡಿದೆ. ಕೆಲವು ದಲಿತ ನೇತಾರರು ಪತ್ರಿಕೆಗಳಲ್ಲಿ ಪ್ರಕಟವಾದ ಚುಂಚನಗಿರಿ ಶ್ರೀಗಳು, ಪೇಜಾವರ ಶ್ರೀಗಳು ಇವರ ಜೊತೆ ಮಾತಾಜಿ ಕಾಣಿಸಿಕೊಂಡದ್ದು ತುಂಬಾ ಖೇದವನ್ನುಂಟು ಮಾಡಿದೆ. ಬಸವ ತತ್ತ್ವಕ್ಕೆ ವಿರುದ್ಧವಾದ ವಿಚಾರಧಾರೆ ಅದಲ್ಲವೆ? ಪೇಜಾವರ ಶ್ರೀಗಳು ಮತ್ತು ಆರ್.ಎಸ್.ಎಸ್.ವರ್ಣಾಶ್ರಮ ಧರ್ಮ ಪ್ರತಿಪಾದಕರು ಮಾತಾಜಿ ಇದನ್ನು ಒಪ್ಪದವರು" ಎಂದು ಕೇಳಿದರು. ಈ ಪ್ರಶ್ನೆಗೆ ಹಿನ್ನೆಲೆ ಏನೆಂದರೆ, ಗಾಂಧಿ ಭವನದಲ್ಲಿ ಒಂದು ಸಭೆ ಇತ್ತು. ಇದನ್ನು ಸಂಯೋಜಿಸಿದ್ದವರು ಪ್ರಾಣಿದಯಾಸಂಘದವರು ಮತ್ತು ಜೈನ ಸಮಾಜದವರು. ನಂತರ ಅವರೇ ಶಿಕ್ಷಕರ ಭವನದಲ್ಲಿ ಸಂತ ಸಮ್ಮೇಳನವನ್ನು ದಿ. 11-03-2010ರಂದು ಏರ್ಪಡಿಸಿದ್ದರು. ದೊಡ್ಡ ರ‍್ಯಾಲಿಯೊಂದನ್ನು ದಿ.22-03-2010ರಂದು ಏರ್ಪಡಿಸಿದ್ದರು. ಅಷ್ಟರಲ್ಲಿ ದಿ.20 ರಂದು ಗೋವಂಶ ಹತ್ಯಾ ನಿಷೇಧದ ಮಸೂದೆಗೆ ವಿಧಾನ ಸಭೆಯಲ್ಲಿ ಅನುಮೋದನೆ ದೊರೆತುದರಿಂದ ದಿ.22 ರ ಸಭೆಯನ್ನು ಸರ್ಕಾರವನ್ನು ಅಭಿನಂದಿಸುವ ಸಭೆಯಾಗಿ ಪರಿವರ್ತಿಸಿದ್ದರು.

ನಮ್ಮ ದೇಶದಲ್ಲಿ ಎಲ್ಲವೂ ಗೊಂದಲಮಯ. ಸಮಸ್ಯೆಗಳು ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಪೂಜ್ಯ ಪೇಜಾವರ ಶ್ರೀಗಳ ನಂಬಿಕೆ ಆಚಾರ ವಿಚಾರ, ಆರ್.ಎಸ್.ಎಸ್.ನ ಧೋರಣೆಗೂ ನಮಗೂ ಬಹಳಷ್ಟು ವ್ಯತ್ಯಾಸವಿದೆ. ಆದರೆ ಗೋವಂಶ ರಕ್ಷಣೆ ಇಡೀ ದೇಶಕ್ಕೆ ಸಂಬಂಧಿಸಿದ್ದಾಗಿದೆ. ನಾವೇನೂ 'ಗೋ'ವನ್ನು ಮಾತೆ ಎಂದಾಗಲೀ, ಅದರಲ್ಲಿ ಎಲ್ಲ ದೇವತೆಗಳು ಇರುವರೆಂದಾಗಲಿ ಭಾವಿಸಿ ಪೂಜಿಸುವವರಲ್ಲ. [ಶ್ರೀ ಶಂಕರ ಎಂಬ ಕಂಚಿ ಶಂಕರ ಪೀಠದವರಿಂದ ಪ್ರಾಯೋಜಿತವಾದ ಒಂದು ಟಿ.ವಿ.ಚಾನೆಲ್ ಪ್ರಾರಂಭೋತ್ಸವದ ಸಿ.ಡಿ. ನೋಡಿದೆ. ಅದರಲ್ಲಿ ಪ್ರಾರಂಭೋತ್ಸವದ ದಿವಸ ಹಸುವಿನ ಹಿಂಭಾಗಕ್ಕೆ ಪೂಜೆ ಮಾಡಿದ್ದು, ಬಾಲಕ್ಕೆ ಕುಂಕುಮ ಹಚ್ಚಿ ಆರತಿ ಬೆಳಗಿದ್ದು ನೋಡಿ ವೈದಿಕರ ಮೌಢ್ಯತೆ ಕಂಡು ಬೆಕ್ಕಸ ಬೆರಗಾದೆ. ನಮ್ಮ ಅಜ್ಜಿ ಆಕಳ ಮುಖಕ್ಕೆ ಪೂಜೆ ಮಾಡಿ, ಅದರ ಹಣೆಗೆ ಕೋಡಿಗೆ ಕುಂಕುಮ ಹಚ್ಚುವುದೇ ನಮಗೆ ಮೌಢ್ಯತೆ ಎನಿಸಿತ್ತು. ಇನ್ನು ಈ ವೈದಿಕ ನಂಬಿಕೆಯುಳ್ಳವರು ಹಿಂಭಾಗಕ್ಕೆ ಪೂಜೆ ಸಲ್ಲಿಸುವುದು ನೋಡಿ ಅಸಹ್ಯವೆನಿಸಿತು]. ಸಕಲ ಜೀವಾತ್ಮರಿಗೆ ಲೇಸು ಬಯಸುವವನೆ ಕುಲಜ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ಎಂಬ ಬಸವ ವಾಣಿಯನ್ನು ದಯೆ ಮಾನವೀಯತೆಯ ದೃಷ್ಟಿಯಿಂದ ಅನುಸರಿಸುವವರು ನಾವು.

ಉದಾತ್ತ ಉದ್ದೇಶಕ್ಕೆ ಒಂದಾಗುವುದು ಅವಶ್ಯ :

ವಿಚಾರಗಳಲ್ಲಿ ವ್ಯತ್ಯಾಸ, ಸೈದ್ಧಾಂತಿಕ ಭಿನ್ನಾಭಿಪ್ರಾಯ ಅತ್ಯಂತ ಸಹಜ. ಆದರೆ ಯಾವುದಾದರೂ ಒಂದು ವಿಷಯ ಉಭಯತರಿಗೂ ಸಮಾನವಾಗಿದ್ದಾಗ ತಾತ್ಕಾಲಿಕವಾಗಿ ಒಂದುಗೂಡಿ ಕೆಲಸ ಮಾಡುವುದು ಅವಶ್ಯಕ. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ, ಕರ್ನಾಟಕದ ಏಕೀಕರಣಕ್ಕಾಗಿ ನಡೆದ ಚಳುವಳಿ ಇವನ್ನು ಕೈಗೊಂಡವರ ಮಧ್ಯೆ ಭಿನ್ನಾಭಿಪ್ರಾಯ ಇರಬಹುದಾದುದು ಸಹಜ. ಆದರೆ ಅವರೆಲ್ಲರೂ ಒಂದೇ ಗುರಿಗಾಗಿ ಒಟ್ಟಾಗಿ ಸತ್ಯಾಗ್ರಹ ಮಾಡಿದರು. ನಮ್ಮ ಮತ್ತು ಇತರ ಸಮಾಜಗಳ ಮಠಾಧೀಶರು ಯಾವ ವಿಷಯದಲ್ಲೂ ತುಟಿ ಪಿಟಕ್ಕೆನ್ನದೆ ಇರುತ್ತಾರೆ. ತಮ್ಮ ಧರ್ಮಕ್ಕೆ ಚ್ಯುತಿ ಬಂದಾಗ ಪ್ರತಿಭಟಿಸಬೇಕಾದುದು

ಅವರ ಕರ್ತವ್ಯವಲ್ಲವೆ? ಮಸೂದೆ ಮಂಡನೆ ಮತ್ತು ಅನುಮೋದನೆಗೆ ಮೊದಲೂ ಸರ್ಕಾರವನ್ನು ಒತ್ತಾಯಿಸಲಿಲ್ಲ. ಏನಾಗುತ್ತೋ ಏನೋ, ಕೆಲಸವಾಗದಿದ್ದರೆ ಎಂಬ ಅಳುಕು ಇರಬಹುದು ಅದಕ್ಕಾಗಿಯೇ ದಿವ್ಯ ಮೌನವನ್ನು ತಾಳಿದ್ದಾರೆ ಎಂದು ಭಾವಿಸಬಹುದು. ವಿಧಾನ ಸಭೆಯಲ್ಲಿ ಮಸೂದೆಯು ಮಂಡನೆಯಾಗಿ ಅನುಮೋದನೆ ಆದ ಬಳಿಕವೂ ಸರ್ಕಾರವನ್ನು ಅಭಿನಂದಿಸುವ ಗೋಜಿಗೆ ಹೋಗಲಿಲ್ಲ. ಮತ್ತೆ ಇವರಲ್ಲಿ ಹೆಚ್ಚಿನವರು ಸರ್ಕಾರದಿಂದ ಉಪಕೃತರಾದವರು, ವಿಪುಲವಾಗಿ ಹಣವನ್ನು ಪಡೆದವರು. ಇವರ ಮೌನಕ್ಕೆ ಮಾಂಸಾಹಾರಿಗಳ ಉಗ್ರ ವಾಗ್ದಾಳಿ ಕಾರಣವಿರಬಹುದೆ? ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳು ದನದ ಮಾಂಸ ಬೇಯಿಸಿ ಉಂಡು ಧೀರತೆ ಮೆರೆದರು. ನಾಳೆ ಸಸ್ಯಾಹಾರಿ ಧರ್ಮಗಳ ಮಠಗಳ ಆವರಣಕ್ಕೂ ನುಗ್ಗಿ ಅಂಥ ಜನರು ಮಾಂಸವನ್ನು ಬೇಯಿಸಿ ತಿನ್ನುವುದಿಲ್ಲ ಎನ್ನುವುದು ಯಾವ ಗ್ಯಾರಂಟಿ? ಅಂದಾಗ ಧರ್ಮರಕ್ಷಣೆ ಮಠಾಧೀಶರ ಕರ್ತವ್ಯವಲ್ಲವೆ?

ವಿಚಾರವಾದಿಗಳ ವಿತಂಡವಾದ

ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ರೈತ ಸಂಘದವರು ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದರು. 4 ಜನರು ಗೋವಂಶ ಹತ್ಯೆಯ ನಿಷೇಧದ ಪರವಾಗಿ, 4 ಜನರು ವಿರೋಧವಾಗಿ ಮಾತನಾಡಲು ಅವಕಾಶ ಕಲ್ಪಿಸಲಾಗಿತ್ತು.

ಮಾಂಸಾಹಾರಿಗಳ ವಾದ ಹೀಗಿದೆ :

ಗೋವಂಶ ಹತ್ಯೆ ನಿಷೇಧ ಜಾರಿಗೆ ಬಂದರೆ......

1. ವಧಾ ಉದ್ಯೋಗವನ್ನೇ ಅವಲಂಬಿಸಿರುವವರಿಗೆ ತೊಂದರೆಯಾಗುತ್ತದೆ.
2. ಈಗ ಒದಗಿಸಲ್ಪಡುವ ಮಾಂಸಾಹಾರದಲ್ಲಿ ಗೋಮಾಂಸದ್ದೇ ಅಧಿಕ ಪಾಲು. ಎಲ್ಲರೂ ಸಸ್ಯಾಹಾರಿಗಳಾದರೆ ಆಹಾರದ ಕೊರತೆಯುಂಟಾಗುತ್ತದೆ. ಮಾಂಸ ಇನ್ನೂ ತುಟ್ಟಿಯಾಗುತ್ತದೆ.
3. ಸಸ್ಯಾಹಾರದಿಂದ ಮನುಷ್ಯ ಹೇಡಿಯಾಗುತ್ತಾನೆ. ಮಾಂಸಾಹಾರ ಶಕ್ತಿಶಾಲಿ.
4. ಚರ್ಮೋದ್ಯೋಗಕ್ಕೆ ತೊಂದರೆ ಬರುತ್ತದೆ.
5. ಹಾಲು ಕೊಡದ ನಿಷ್ಪ್ರಯೋಜಕವಾದ ದನಗಳಿಗೆ ಮೇವು ಎಲ್ಲಿಂದ ತರುವುದು? ರೈತರು ಹೇಗೆ ಸಾಕುವರು. ಅವು ಹೊರೆಯಾಗವೆ?
6. ಕಾನೂನಿನ ದುರುಪಯೋಗವಾಗಿ ಮಾಂಸಾಹಾರಿಗಳು ತೊಂದರೆಗೆ ಒಳಗಾಗುವರು.

ಈ ವಾದದವರಲ್ಲಿ ದೇಶದ ಹಿತದೃಷ್ಟಿಯ ಚಿಂತನೆ ನನಗಂತೂ ಕಾಣಬರಲಿಲ್ಲ. ವಧಾ ಉದ್ಯೋಗ ಮಾಡುವವರ (ಕಟುಕರು)ಲ್ಲಿ ಎರಡು ಪ್ರಕಾರ. ಒಂದು ಕೈಯಲ್ಲಿ ಮಾಡುವುದಾದರೆ ಮತ್ತೊಂದು ಯಾಂತ್ರೀಕೃತ ಕಸಾಯಿಖಾನೆಗಳು. ಮೊದಲನೆಯವರು ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಪ್ರಾಣಿಗಳನ್ನು ಕಡಿದರೆ, ಯಾಂತ್ರೀಕೃತ ಕಸಾಯಿಖಾನೆಗಳವರು ಬೃಹತ್ ಪ್ರಮಾಣದಲ್ಲಿ ಕಡಿದು, ಡಬ್ಬಿಗಳಲ್ಲಿ ತುಂಬಿ ವಿದೇಶಗಳಿಗೆ ರವಾನೆ ಮಾಡುತ್ತಾರೆ.

"ನಮ್ಮ ಆಹಾರವನ್ನು ಕಿತ್ತುಕೊಳ್ಳುತ್ತಾರೆ" ಎಂದು ಈ ವಿಚಾರವಾಗಿ ಮಾಂಸಾಹಾರಿಗಳು ಟೀಕಿಸುತ್ತಿದ್ದಾರೆ. ವಿದೇಶಿ ಸಂಸ್ಥೆಗಳು ತೆರೆದಿರುವ ಯಾಂತ್ರೀಕೃತ ಕಸಾಯಿಖಾನೆಗಳವರು ದಿನನಿತ್ಯ ಸಹಸ್ರಾರು ದನಗಳನ್ನು ವಧೆ ಮಾಡಿ ಮಾಂಸವನ್ನು ವಿದೇಶಗಳಿಗೆ ರವಾನಿಸುತ್ತಿದ್ದಾರೆ. ನಾಶವಾಗುತ್ತಿರುವುದು ಭಾರತದ ಗೋ ಸಂಪತ್ತು. ತಿನ್ನುವವರು ವಿದೇಶದವರು ನಮ್ಮ ಉದ್ಯೋಗವನ್ನು ಏಕೆ ಕಿತ್ತುಕೊಳ್ಳುತ್ತಿದ್ದೀರೆಂದು ನಿಜವಾಗಿಯೂ ಕೇಳಬೇಕಾದುದು ಯಾಂತ್ರೀಕೃತ ಕಸಾಯಿಖಾನೆಯವರನ್ನು !

ಭಾರತದ ಜನಸಂಖ್ಯೆ ವೃದ್ಧಿಯಾದಂತೆ ಗೋ ಸಂಪತ್ತು ವೃದ್ಧಿಯಾಗಲಿಲ್ಲ. ಕಾರಣ ಅತಿವೃಷ್ಟಿ, ಅನಾವೃಷ್ಟಿ, ಮೇವಿನ ಸಮಸ್ಯೆ, ಗೋಮಾಳಗಳ ಕಬಳಿಕೆ, ನಗರಕ್ಕೆ ವಲಸೆ ಇತ್ಯಾದಿ. ದಿನ ನಿತ್ಯ ವಧೆಯಾಗಿ ಗೋ ಸಂಪತ್ತು ನಶಿಸುತ್ತಿದೆ. ಹೀಗೇ ಮುಂದುವರಿದರೆ ಮುಂದೊಂದು ದಿನ ಹಾಲು ತುಪ್ಪಗಳನ್ನು ಐರೋಪ್ಯದೇಶ, ಅಮೆರಿಕಾದಿಂದ ಆಮದು ಮಾಡಿಕೊಳ್ಳುವ ಕಾಲ ಬಂದೀತು.

ನಮ್ಮ ದೇಶದ ನೆಲ, ಜಲ, ಪರಿಸರ ಎಲ್ಲವೂ ವಿಷಯುಕ್ತವಾಗುತ್ತಿದೆ. ಭೂಮಿಗೆ ರಾಸಾಯನಿಕ ಗೊಬ್ಬರ, ಬೆಳೆಗಳಿಗೆ ಕೀಟ ನಾಶಕ ಸಿಂಪರಣೆ – ಇದರಿಂದ ಬಹಳಷ್ಟು ಹಾನಿಯಾಗುತ್ತಿದೆ. ತಾಯಿಯ ಎದೆ ಹಾಲಿನಲ್ಲಿ ಡಿಡಿಟಿ ಅಂಶವಿರುತ್ತದೆ ಎಂಬ ವರದಿ ಒಮ್ಮೆ ಪ್ರಕಟವಾಗಿತ್ತು. ಫ್ಯಾಕ್ಟರಿಗಳು ವಾತಾವರಣಕ್ಕೆ ಸೇರಿಸುವ ಹೊಗೆ, ನದಿಗಳಿಗೆ ಸೇರಿಸುವ ರಾಸಾಯನಿಕ ತ್ಯಾಜ್ಯ ಇವೆಲ್ಲ ಮಿತಿ ಮೀರುತ್ತಿವೆ. ನೈಸರ್ಗಿಕ ಕೃಷಿ, ಸಾವಯವ ಕೃಷಿ ರೂಢಿಗೆ ಬಂದರೆ ಮಾತ್ರ ಹೆಚ್ಚಿನ ವಿಪತ್ತಿಗೆ ತಡೆ ಹಾಕಬಹುದು. ಸಾಂಪ್ರದಾಯಿಕ ನೈಸರ್ಗಿಕ, ಸಾವಯವ ಕೃಷಿಗೆ ಅತಿ ಅವಶ್ಯವಾದುದು ಗೋವಿನ – ಹಸು, ಎತ್ತು, ಎಮ್ಮೆ, ಕೋಣ ಅವುಗಳ ಕರುಗಳು ಮುಂತಾದುವುಗಳ ಸಗಣಿ, ಗಂಜಳ, ಎರೆಹುಳುವಿನ ಗೊಬ್ಬರ ಮುಂತಾದುವು.

ವಧಾ ಉದ್ಯೋಗವನ್ನು ಅವಲಂಬಿಸಿದವರಿಗೆ ಬೇಡಿಕೆಗೆ ಅನುಗುಣವಾಗಿ ಕಡಿಯಲು ಇತರ ಪ್ರಾಣಿಗಳು ಇದ್ದೇ ಇವೆ. ಭೂಸಾರವನ್ನು ರಕ್ಷಿಸುವ ಗೋವುಗಳೇ ಏಕೆ ಬೇಕು? ಪ್ರಾಣಿಗಳಲ್ಲಿ ಅತಿ ಶಕ್ತಿಶಾಲಿಯಾದವೆಂದರೆ ಆನೆ, ಕುದುರೆ, ಒಂಟೆ ಮುಂತಾದವು. ಇವೆಲ್ಲವೂ ಶುದ್ಧ ಸಸ್ಯಾಹಾರಿಗಳು. ಮಾಂಸಾಹಾರದಿಂದ ಹೃದಯ ಸಂಬಂಧಿ ಕಾಯಿಲೆಗಳು ಬಹಳ. ಸಸ್ಯಾಹಾರವೇ ಆರೋಗ್ಯಕರ ಎಂಬುದನ್ನು ವೈದ್ಯ ವಿಜ್ಞಾನವೂ ದೃಢಪಡಿಸುತ್ತದೆ. ಹೀಗಾಗಿ ವಿದೇಶಗಳಲ್ಲಿ ಸಹ ಸಸ್ಯಾಹಾರಿ ಸಂಘಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮಾಂಸಾಹಾರಿಗಳು ಸಸ್ಯಾಹಾರವಿಲ್ಲದೆ ಜೀವಿಸಲಾರರು, ಸಸ್ಯಹಾರಿಗಳು ಕೇವಲ ಸಸ್ಯಾಹಾರದ ಮೇಲೆಯೇ ಬದುಕಬಲ್ಲರು. ಎಲ್ಲರೂ ಸಸ್ಯಾಹಾರಿಗಳಾದರೆ ಆಹಾರದ ಕೊರತೆಯುಂಟಾಗುತ್ತದೆ ಎಂಬುದು ತಪ್ಪು ಕಲ್ಪನೆ. ಸಸ್ಯಾಹಾರಿ ಬದುಕಲು ಒಂದು ವರ್ಷಕ್ಕೆ ಮುಕ್ಕಾಲು ಎಕರೆ ಜಮೀನಾದರೆ ಸಾಕು. ಅವನು ತಿನ್ನುವ ಪ್ರಾಣಿಯನ್ನು ಮೇಯಿಸಲು, ಸಾಕಲು ಅವನಿಗೆ ಒಂದೂವರೆ ಎಕರೆ ಜಮೀನು ಬೇಕಾಗುವುದಂತೆ.

ಮುದಿ ಗೋವುಗಳನ್ನು ಏನು ಮಾಡುವುದು? ಜೀವನ ಪರ್ಯಂತರ ದುಡಿದು ಹಾಲೂಡಿಸಿದ, ಭೂಮಿಯನ್ನು ಉತ್ತ, ಹೇರನ್ನು ಹೊತ್ತ ಪ್ರಾಣಿಯನ್ನು ಮುದಿಯಾಯಿತೆಂದು ಕಟುಕರಿಗೆ ಒಪ್ಪಿಸುವುದು ಧರ್ಮವೆ? ಮುಪ್ಪಾದ ತಾಯಿತಂದೆಯರು ನಿಷ್ಪ್ರಯೋಜಕರು ಎಂದು ವಧೆ ಮಾಡಲಾಗುವುದೇ? ಹಾಗೆ ಭೂಮಿ, ಮೇವು, ಶಕ್ತಿ ಇದ್ದವರು ಮುದಿ ಜಾನುವಾರುಗಳನ್ನು ಸಾಕುತ್ತ ಅವುಗಳ ಸಗಣಿ-ಗಂಜಲದಿಂದ ಗೊಬ್ಬರ, ಗೋಬರ್ ಗ್ಯಾಸ್ ತಯಾರುಮಾಡಿಕೊಳ್ಳಬಹುದು. ಬಡವರಿಗಾಗಿ ಸರ್ಕಾರವು ಗೋಮಾಳ, ತೋಪು, ಕೆರೆಗಳನ್ನು ಅಭಿವೃದ್ಧಿ ಪಡಿಸುವುದಲ್ಲದೆ ಪ್ರತಿಗ್ರಾಮಕ್ಕೂ ಗೋಶಾಲೆಯನ್ನು ತೆರೆಯಬೇಕು. ಅಲ್ಲಿ ಗೋಬರ್ ಗ್ಯಾಸ್ ಉತ್ಪಾದನೆ, ಕಾಂಪೋಸ್ಟ್ ಗೊಬ್ಬರ ತಯಾರಿಸಿ ಮಾರಬಹುದು. ಇದರಿಂದ ಅನೇಕ ರೈತರಿಗೆ ಉದ್ಯೋಗ ಕೊಡಲು ಸಾಧ್ಯವಾಗುತ್ತದೆ. ಮನುಷ್ಯರಿಗೆ ವೃದ್ಧಾಶ್ರಮ ತೆರೆದಂತೆ ಜಾನುವಾರುಗಳಿಗೆ ಗೋಶಾಲೆ ತೆರೆಯಬಹುದು. ಗೋಶಾಲೆ ತೆರೆಯುವ ರೈತರಿಗೆ ಪ್ರೋತ್ಸಾಹ ನೀಡಬಹುದು. ವೃದ್ಧರು ನಿಸ್ಸಹಾಯಕರಾದಾಗ ನಿಷ್ಪ್ರಯೋಜಕರಾದರೂ ಮಾನವೀಯ ದೃಷ್ಟಿಯಿಂದ ಅವರನ್ನು ಸಾಕಲಾಗುವುದಷ್ಟೆ? ಗೋ ಸಂತಾನವು ಕಡೆಯ ಕ್ಷಣದವರೆಗೆ ಉಪಯುಕ್ತ, ಸತ್ತ ನಂತರ ಅವುಗಳ ಚರ್ಮ, ಮೂಳೆ, ಕೊಂಬು ಉಪಯುಕ್ತ.

ಗೋಹತ್ಯೆ ನಿಂತರೆ ಚರ್ಮೋದ್ಯೋಗಕ್ಕೆ ತೊಂದರೆ ಎಂದು ಕೆಲವರ ಅಭಿಪ್ರಾಯ. ಈಗಂತೂ ಚರ್ಮದಿಂದ ಮಾಡುವ ವಸ್ತುಗಳಿಗಿಂತಲೂ ಕೃತಕ ವಸ್ತುಗಳಿಂದ ತಯಾರು ಮಾಡುವ ಕೈಚೀಲ, ಚಪ್ಪಲಿಗಳಿಗೇ ಬೇಡಿಕೆ ಜಾಸ್ತಿ. ಜಾನುವಾರು ಸತ್ತ ನಂತರ ಅದರ ಚರ್ಮ, ಮೂಳೆ, ಕೊಂಬು ಸಿಕ್ಕೆ ಸಿಗುತ್ತವಷ್ಟೆ, ಅದನ್ನು ಜೀವಂತವಿದ್ದಾಗ ಕೊಂದು ಏಕೆ ಕಿತ್ತುಕೊಳ್ಳಬೇಕು. ದೇವರು ಸಸ್ಯಾಹಾರವೆಂಬ ಸಾತ್ವಿಕ ಜೀವನ ಪದ್ಧತಿಯನ್ನು ಮಹಾವೀರ, ಗುರುಬಸವಣ್ಣನವರು ಮುಂತಾದ ಮಹಾನುಭಾವರ ಮೂಲಕ ಕಲಿಸಿರಬೇಕಾದರೆ ಮನುಷ್ಯ ಕ್ರೂರಿಯಾಗಿ ಇನ್ನೊಂದು ಜೀವಿಯು ಬದುಕುವ ಹಕ್ಕನ್ನೇಕೆ ಕಿತ್ತುಕೊಳ್ಳಬೇಕು?

ಕಾನೂನಿನ ದುರುಪಯೋಗವಾಗಿ (ಗೋ) ಮಾಂಸಾಹಾರಿಗಳು ತೊಂದರೆಗೆ ಒಳಗಾಗುವರು ಎಂಬುದು ಒಂದು ವಾದ. ಗೋ ಸಂತಾನವನ್ನು ಸಾಗಿಸುವ ರೀತಿ, ನೂರಾರು ಕಿಲೋಮೀಟರ್ ಆಹಾರ, ನೀರು ಇಲ್ಲದೆ ಹೊಡೆದುಕೊಡುವ ಬಗೆ, ಎಳೆಯ ಕರುಗಳನ್ನು ಟೆಂಪೋಗಳಲ್ಲಿ ತುರುಕುವ ರೀತಿ, ಅವುಗಳನ್ನು ಕೊಲ್ಲುವಾಗ ಅವು ಮಾಡುವ ಆಕ್ರಂದನ–ಈ ವಿಚಾರವಾದಿಗಳ ಹೃದಯವನ್ನು ತಟ್ಟದಿರುವುದು ಸೋಜಿಗ. ಇವರಿಗೆ ಮಾನವೀಯತೆಯ ಬಗ್ಗೆ ಮಾತನಾಡುವ ಹಕ್ಕಿದೆಯೆ? ಮನುಷ್ಯನಿಗಾಗಿಯೇ ಎಲ್ಲವೂ, ಪ್ರಾಣಿಗಳು ಸಹ ಎಂಬುದು ದಯೆಯೇ? ಈ ಎಲ್ಲ ವಿಚಾರವಾದಿಗಳು, "ಬಸವಣ್ಣನವರ ಬಗ್ಗೆ ನಮಗೆ ಗೌರವವಿದೆ. ಅವರು ಅನುಕರಣೀಯ ಆದರ್ಶ ಪುರುಷರು" ಎನ್ನುತ್ತಾರೆ. ಹಾಗಾದರೆ ಗುರುಬಸವಣ್ಣನವರು ಪ್ರತಿಪಾದಿಸಿದ ಸಸ್ಯಾಹಾರವನ್ನೇಕೆ ಅವಲಂಬಿಸಬಾರದು?

ಬರ್ನಾಡ್ ಶಹಾ ಕ್ರೈಸ್ತನಾಗಿದ್ದರೂ ಶುದ್ಧ ಸಸ್ಯಾಹಾರಿಯಾಗಿದ್ದ. ಯಾರೋ ಕೇಳಿದಾಗ ಹೇಳಿದ "My stomach is not a grave to put dead bodies into it", "ನನ್ನ ಹೊಟ್ಟೆ ಒಂದು ಸ್ಮಶಾನವಲ್ಲ, ಸತ್ತ ಪ್ರಾಣಿಗಳನ್ನು ತುಂಬಲು" ಎಂದು ನುಡಿದ.

ಆದಿ ಮಾನವ ಪ್ರಾಣಿಗಳನ್ನು ಬೇಟೆಯಾಡಿ ಹಸಿಯಾಗೇ ತಿನ್ನುತ್ತಿದ್ದ. ನಂತರ ಬೆಂಕಿಯನ್ನು ಕಂಡು ಹಿಡಿದು ಬೇಯಿಸಿಕೊಂಡು ತಿಂದ. ನಂತರ ಕೃಷಿಯ ಆವಿಷ್ಕಾರವಾಯಿತು. ಸಸ್ಯಾಹಾರಿ ಜೀವನಪದ್ಧತಿ ಕಂಡುಕೊಂಡ. ಅಂದಾಗ ಇಂದಿನ ಆಧುನಿಕ ಮಾನವ ಪುನಃ ಆದಿ ಮಾನವನ ಸ್ಥಿತಿಗೆ ಏಕೆ ಹೋಗಬೇಕು? ಪ್ರತಿಯೊಂದಕ್ಕೂ ಸಮಸ್ಯೆಗಳಿರುತ್ತವೆ; ಅದಕ್ಕೆ ಪರಿಹಾರವೂ ಇರುತ್ತದೆ.

ಈ ಹಿನ್ನೆಲೆಯಲ್ಲಿ ಸಸ್ಯಾಹಾರವನ್ನು ಪ್ರೋತ್ಸಾಹಿಸುವ ಪೂಜ್ಯ ಪೇಜಾವರ ಶ್ರೀಗಳೊಡನೆ, ಜೈನ ಸಂಘಟನೆ, ಪ್ರಾಣಿದಯಾ ಸಂಘದವರೊಡನೆ ವೇದಿಕೆ ಹಂಚಿಕೊಂಡ ಮಾತ್ರಕ್ಕೆ ನಾವು ವೈದಿಕ ಧರ್ಮದ ಪ್ರತಿಪಾದಕರಾಗುತ್ತೇವೆಯೇ? ಕಮ್ಯುನಿಸ್ಟ್ ವಿಚಾರ ಧಾರೆಯವರನ್ನು ಬಹಳಷ್ಟು ಸಲ ನಾವು ಆಹ್ವಾನಿಸುತ್ತೇವೆ. ಏಕೆಂದರೆ, ಸಂಪ್ರದಾಯವಾದಿಗಳಿಗಿಂತಲೂ ಕಮ್ಯುನಿಷ್ಟರಿಗೆ ಬಸವಣ್ಣನವರ ವಿಚಾರಧಾರೆ ಹೆಚ್ಚು ಹಿಡಿಸುತ್ತದೆ. ಅವರೊಡನೆ ವೇದಿಕೆ ಹಂಚಿಕೊಂಡ ಮಾತ್ರಕ್ಕೆ ನಾವು ನಾಸ್ತಿಕರಾಗುತ್ತೇವೆಯೆ?

2. ಧರ್ಮಪ್ರಚಾರ ಬಹುದೊಡ್ಡ ಸಾಹಸ

ಭಾರತ ದೇಶದಲ್ಲಿ ಧರ್ಮಪ್ರಚಾರಕ ವ್ಯವಸ್ಥೆಯನ್ನು (Missionary System) ಜಾರಿಗೆ ತಂದ ಮೊಟ್ಟ ಮೊದಲ ಮಹಾತ್ಮ ಗೌತಮ ಬುದ್ಧ ಹಾಗೆ ನೋಡಿದರೆ ವಿಶ್ವದಲ್ಲೇ ಪ್ರಥಮ ವ್ಯಕ್ತಿ ಎನ್ನಬಹುದು. ಏಕೆಂದರೆ ಏಸುಕ್ರಿಸ್ತರಿಗೂ ಪೂರ್ವದ ವ್ಯಕ್ತಿ ಗೌತಮ ಬುದ್ಧ ನಂತರ ಆ ದಿಶೆಯಲ್ಲಿ ಪ್ರಯತ್ನಿಸಿದವರು ಗುರು ಬಸವಣ್ಣನವರು. ಅವರು ಜಂಗಮ ವ್ಯವಸ್ಥೆಯನ್ನು ರೂಢಿಗೊಳಿಸಿದರು. ಲಿಂಗಾಯತ ಶರಣ

ಪರಂಪರೆಯಲ್ಲಿ ಆ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಿದವರು ಎಡೆಯೂರು ಸಿದ್ಧಲಿಂಗೇಶ್ವರರು. ಅಸಂಖ್ಯಾತ ವಿರಕ್ತರನ್ನು ತರಬೇತಿಗೊಳಿಸಿ ಕರ್ನಾಟಕ ಮಾತ್ರವಲ್ಲ ತಮಿಳುನಾಡು ಕೇರಳಗಳನ್ನು ಸಂದರ್ಶಿಸಿ, ಜನರನ್ನು ಪರಿವರ್ತಿಸಿ ಬಂದರು. ಅವರ ನಂತರ ಹೇಳಬಹುದಾದ ಹೆಸರೆಂದರೆ ಪರಮಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು. ಪುಸ್ತಕಗಳಲ್ಲಿ ಅದೂ ವಿಶ್ವವಿದ್ಯಾಲಯಗಳ ಆವರಣದಲ್ಲಿ ಅವಿತಿದ್ದ ವಚನ ಸಾಹಿತ್ಯವನ್ನು ಮನೆ ಮನೆಗೆ ಮನಮನಕ್ಕೆ ಪ್ರವಚನಗಳ ಮೂಲಕ ಮುಟ್ಟಿಸಿದ್ದೇ ಅಲ್ಲದೆ ಹಲವಾರು ಧರ್ಮ ಪ್ರಚಾರಕರು ತಯಾರಾಗಲು ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಪ್ರೇರಕ ಶಕ್ತಿಯಾದರು; ಅನೇಕ ವಿರಕ್ತರು ಬಸವ ತತ್ವದ ಹಳಿಬಿಟ್ಟು ಸಾಗಿದ್ದವರು ಇದರಿಂದ ಪುನಃ ಹಳಿಯ ಮೇಲೆ ಬರುವಂತಾಯಿತು.

"ಪ್ರವಚನ ಎಂಬ ಪವಿತ್ರ ಕಾಯಕದಲ್ಲೇ ನನ್ನ ಜೀವನ ಸವೆಸಿದೆ. ಇದು ಒಂದು ವಾಙ್ಮಯ ತಪಸ್ಸು, ಸಮಷ್ಟಿ ತಪಸ್ಸು. ಧ್ಯಾನದಲ್ಲಿ, ಸಮಾಧಿಯಲ್ಲಿ ಮಾಡುವ ಸಾಧಕನಿಗಷ್ಟೇ ಆನಂದವಾದರೆ ಪ್ರವಚನ ತಪಸ್ಸಿನಲ್ಲಿ ಮಾಡುವವನಿಗಷ್ಟೇ ಅಲ್ಲ ಕೇಳುವವನಿಗೂ ತನ್ಮಯತೆ ಪ್ರಾಪ್ತಿಯಾಗುತ್ತದೆ. ಎರಡು ತಾಸು ಕಾಲ ಉಭಯತರೂ ಆನಂದದಲ್ಲಿ ಇರುವಂತಾಗುತ್ತದೆ. ಈ ಕಾಯಕವನ್ನು ನೀವುಗಳು ಮುಂದುವರಿಸಿಕೊಂಡು ಹೋಗಬೇಕು. ನನ್ನ ಕಾಲಕ್ಕೇ ನಿಲ್ಲಬಾರದು." ಎಂದು ಪೂಜ್ಯ ಅಪ್ಪಾಜಿ ಹೇಳುತ್ತಿದ್ದರು.

ಬುದ್ಧನ ಈ ಧರ್ಮಪ್ರಚಾರಕ ವ್ಯವಸ್ಥೆ ಕುರಿತು, ಆತನು ಬೆಳೆಸಿದ ಧರ್ಮ ಪ್ರಚಾರಕ ಕಳಕಳಿ ಬಗ್ಗೆ ಕೆಲವು ದೃಷ್ಟಾಂತಗಳು ಬರುತ್ತವೆ. ಅವು ಬಹಳ ಹೃದಯಸ್ಪರ್ಶಿಯೂ, ಸ್ಫೂರ್ತಿದಾಯಕವೂ ಆಗಿವೆ. (ಒಂದು ಗಮನಾರ್ಹ ಮತ್ತು ಆಶ್ಚರ್ಯಕರ ಸಂಗತಿ ಎಂದರೆ ಗೌತಮ ಬುದ್ಧ 2000 ವರ್ಷಗಳಿಗೂ ಪೂರ್ವದ ವ್ಯಕ್ತಿಯಾದರೂ ಆತನ ಬದುಕು, ಘಟನೆಗಳು, ಪ್ರವಾಸ, ದೃಷ್ಟಾಂತ ಕಥೆಗಳೂ ಐತಿಹಾಸಿಕವಾಗಿ ದಾಖಲಿಸಲ್ಪಟ್ಟಿವೆ. ಗುರು ಬಸವಣ್ಣನವರು 12ನೆಯ ಶತಮಾನದವರಾದರೂ ಅವರ ಬದುಕಿನ ಕ್ರಾಂತಿಕಾರಿ, ಬೋಧಕ ಪ್ರಸಂಗಗಳು ಕಾವ್ಯ-ಪುರಾಣಗಳ ಗೋಜಲಿನಲ್ಲಿ ಮುಚ್ಚಿಹೋಗಿ ತಮ್ಮ ಪ್ರಖರತೆಯನ್ನು ಕಳೆದುಕೊಂಡಿವೆ. ಉದಾ: ಜಂಗಮ, ಜಂಗಮ ದಾಸೋಹ, ವೇಶ್ಯಾವೃತ್ತಿ ನಿರ್ಮೂಲನೆ)

ಗೌತಮ ಬುದ್ಧ ಹಲವಾರು ಧರ್ಮಪ್ರಚಾರಕರನ್ನು ತರಬೇತಿಗೊಳಿಸಿದ. ಅವರನ್ನು ಕಾರ್ಯಕ್ಷೇತ್ರಕ್ಕೆ ಕಳಿಸುವ ಮುನ್ನ ಕೆಲವು ಪ್ರಶ್ನೆಗಳನ್ನು ಕೇಳಿದ.

ಪ್ರ: ನೀವು ಧರ್ಮಬೋಧನೆಗೆ ಹೋದಾಗ ಯಾರೂ ಬಂದು ಕೇಳದಿದ್ದರೆ ಏನು ಮಾಡುವಿರಿ?
ಉ: ನಮ್ಮನ್ನು ಯಾರೂ ಬೈಯಲಿಲ್ಲ ಎಂದು ಮುಂದುವರಿಸುತ್ತೇವೆ.
ಪ್ರ: ನಿಮ್ಮನ್ನು ಯಾರಾದರೂ ಬೈದರೆ ಏನು ಮಾಡುವಿರಿ?
ಉ: ಸದ್ಯ ನಮ್ಮನ್ನು ಯಾರು ಹೊಡೆಯಲಿಲ್ಲವಲ್ಲ ಎಂದು ಬೋಧೆಯನ್ನು ಮುಂದುವರೆಸುತ್ತೇವೆ.
ಪ್ರ: ಯಾರಾದರೂ ಹೊಡೆದರೆ ಏನು ಮಾಡುತ್ತೀರಿ?
ಉ: ನಮ್ಮನ್ನು ಕೊಲ್ಲಲಿಲ್ಲವಲ್ಲ ಎಂದು ಮುಂದುವರಿಸುತ್ತೇವೆ.
ಪ್ರ: ಯಾರಾದರೂ ಕೊಲ್ಲಲು ಬಂದರೆ ಏನು ಮಾಡುತ್ತೀರಿ?
ಉ: ನಮ್ಮ ಗುರುವಿನ ತತ್ವಗಳನ್ನು ಸಾರುತ್ತ ನಾವು ಪ್ರಾಣ ಬಿಡುತ್ತೇವೆ ಎಂದು ಮುಂದುವರಿಸುತ್ತೇವೆ.

"ನೀವೀಗ ತಯಾರಾಗಿದ್ದೀರಿ. ಇನ್ನು ಧರ್ಮ ಪ್ರಚಾರಕ್ಕೆ ಹೋಗಬಹುದು." ಎಂದು ಗೌತಮ ಬುದ್ಧ ಒಪ್ಪಿಗೆ ಕೊಟ್ಟನಂತೆ.

ಪೂಜ್ಯ ಅಪ್ಪಾಜಿಯವರು ಸ್ವಯಂ ಪ್ರೇರಣೆಯಿಂದ ಸನ್ಯಾಸ ತೆಗೆದುಕೊಂಡು ಧರ್ಮ ಪ್ರಚಾರಕ್ಕೆ ಹೋದಾಗ ಬಹಳ ಸಂಕಷ್ಟಗಳನ್ನು ಎದುರಿಸಿದ್ದಾರೆ. ಏಕೆಂದರೆ ವಿಕೃತಗೊಂಡ ಸಂಪ್ರದಾಯದಿಂದ

ಜಡ್ಡುಗಟ್ಟಿದ ಸಮಾಜದಲ್ಲಿ ಅವರು ಸೆಣಸಬೇಕಿತ್ತು. ಮತ್ತೊಂದು ಪ್ರಸಂಗ; ಒಬ್ಬ ವಿದೇಶಿ ಯಾತ್ರಿಕ ಬಂದು ಸಂಚರಿಸಿ ಬೌದ್ಧ ಸಾಹಿತ್ಯವನ್ನು ಸಂಗ್ರಹಿಸಿಕೊಂಡು ಜೊತೆಗೊಬ್ಬ ಧರ್ಮ ಪ್ರಚಾರಕ ಭಿಕ್ಕುವನ್ನು ಕರೆದುಕೊಂಡು ತನ್ನ ದೇಶಕ್ಕೆ ಹೊರಟ. ಸಮುದ್ರ ಮಾರ್ಗವಾಗಿ ಹೋಗುತ್ತಿರುವಾಗ ಹಡಗಿನ ಕಫ್ತಾನ ಗಾಬರಿಯಿಂದ ಬಂದು ಹೇಳಿದ, "ಹಡಗಿನಲ್ಲಿ ಭಾರ ಜಾಸ್ತಿಯಾಗಿದೆ. ಕೆಲವು ಸಾಮಾನುಗಳನ್ನು ಸಮುದ್ರಕ್ಕೆ ಎಸೆದು ಭಾರ ಕಮ್ಮಿ ಮಾಡಬೇಕು." ಆಗ ಯಾತ್ರಿಕನು ತಾನು ಸಂಗ್ರಹಿ ಸಿ ತಂದ ಧಾರ್ಮಿಕ ಸಾಹಿತ್ಯದ ಗಂಟನ್ನು ಸಮುದ್ರಕ್ಕೆ ಎಸೆಯುವ ಸಿದ್ಧತೆ ಮಾಡತೊಡಗಿದ. ಆಗ ಭಿಕ್ಕುವು ಹೇಳಿದ, "ಸಾಹಿತ್ಯವು ಅಮರ. ನನ್ನಂತಹ ಪ್ರಚಾರಕರು ಸಾಕಷ್ಟು ಜನ ಹುಟ್ಟಿ ಬರಬಹುದು. ಆದರೆ ಸಾಹಿತ್ಯ ಪುನಃ ಪುನಃ ಸೃಷ್ಟಿಯಾಗದು. ಆದ್ದರಿಂದ ಸಾಹಿತ್ಯ ರಕ್ಷಿಸಿರಿ, ಭಾರ ಕಮ್ಮಿ ಮಾಡಲು ನಾನೇ ಸಮುದ್ರಕ್ಕೆ ಧುಮುಕುತ್ತೇನೆ." ಎಂದು. ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಬೇಕೆಂದು ಪಣ ತೊಟ್ಟಾಗ ನಮ್ಮ ಆದಿ ಶರಣರು ಪ್ರಾಣವನ್ನು ಪಣಕ್ಕಿಟ್ಟು ಯುದ್ಧ ಮಾಡಿ, ಕಾಡು ಮೇಡು ಸೇರಿ, ಕಷ್ಟನಷ್ಟ ಅನುಭವಿಸಿ ವಚನ ವಾಙ್ಮಯವನ್ನು ರಕ್ಷಿಸಿದ್ದಾರೆ.

ಗೌತಮ ಬುದ್ಧನ ಇನ್ನೊಂದು ಕಥೆಯನ್ನು ಸನ್ಮಾನ್ಯ ಎಸ್. ಷಡಕ್ಷರಿಯವರು ಪ್ರಸ್ತಾಪಿಸಿದ್ದಾರೆ. ವೈದಿಕ ಧರ್ಮ ಪುರೋಹಿತ ಶಾಹಿಯ ಮೇಲೆ ನಿಂತ ಧರ್ಮ. ಜನರನ್ನು ಪುರೋಹಿತಶಾಹಿಯು ಅವರಿಗರಿಯದಂತೆ ಬಲೆಯಲ್ಲಿ ಸಿಕ್ಕಿಸಿಕೊಂಡು ಶೋಷಿಸುತ್ತದೆ. ಜಿಗಳೆಯು ಒಂದು ಚಿಕ್ಕ ಹುಳುವಾಗಿ ಶರೀರಕ್ಕೆ ಅಂಟಿಕೊಳ್ಳುತ್ತದೆ. ರಕ್ತವನ್ನು ಹೀರುತ್ತ ಹೀರುತ್ತ ಉಬ್ಬುತ್ತದೆ. ಅದು ರಕ್ತ ಹೀರುವುದು ವ್ಯಕ್ತಿಯ ಗಮನಕ್ಕೆ ಬರದಂತೆ ಜಿಗಳೆಯ ಲಾಲಾರಸ ಕೆಲಸ ಮಾಡುತ್ತದೆ. ತನ್ನ ಹೊಟ್ಟೆ ತುಂಬುವಷ್ಟು ರಕ್ತ ಕುಡಿದ ಮೇಲೆ ಜಿಗಳೆ ಉದುರುತ್ತದೆ. ಆಗ ಅದು ರಕ್ತ ಹೀರಿದ ಜಾಗದಲ್ಲಿ ನವೆ ಶುರುವಾಗುತ್ತದೆ ಮತ್ತು ರಕ್ತವು ಒಸರುತ್ತದೆ. ಪುರೋಹಿತಶಾಹಿಯ ವೈಖರಿಯೂ ಜಿಗಳೆಯ ಕೆಲಸದಂತೆ ಇರುತ್ತದೆ. ತಾವು ಶೋಷಣೆಗೆ ಒಳಗಾಗುತ್ತಿದ್ದೇವೆ ಎಂಬ ಅರಿವಿಲ್ಲದೆ ಜನರು ಭಯ ಮಿಶ್ರಿತವಾದ ಭಕ್ತಿಯಿಂದ ಅಂಧ ಶ್ರದ್ಧೆಯಿಂದ ಕೂಡಿ ಶೋಷಣೆಗೆ ಪಕ್ಕಾಗುತ್ತಾರೆ. ಪುರೋಹಿತಶಾಹಿಯು ಜನರು ಜಾಗೃತನಾಗ ಬಾರದೆಂದು ಪ್ರಗತಿಪರ ವಿಚಾರಗಳಿಗೆ ಅಡ್ಡಿಯನ್ನುಂಟು ಮಾಡುತ್ತಿರುತ್ತದೆ. ಆದರೆ ಸತ್ಯ ಪ್ರತಿಪಾದಕರು ಧೈರ್ಯಗೆಡದೆ ಮುಂಸಾಗಿ ಕಡೆಯಲ್ಲಿ ಯಶಸ್ಸನ್ನು ಪಡೆಯುತ್ತಾರೆ ಎಂಬುದೇ ಆ ದೃಷ್ಟಾಂತದ ಮರ್ಮ.

ಚಿತ್ರದುರ್ಗದಲ್ಲಿ ಪ್ರವಚನ ಕಾರ್ಯಕ್ರಮವನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ. 6-2-2010ರಂದು ಆರಂಭಿಸಿದರು. ಅತ್ಯಂತ ಉತ್ತಮ ಪ್ರತಿಕ್ರಿಯೆಯೊಡನೆ ಪ್ರವಚನವು ಪ್ರಾರಂಭವಾಯಿತಲ್ಲದೆ ದಿನದಿನಕ್ಕೆ ಹೆಚ್ಚಿನ ಜನರನ್ನು ಆಕರ್ಷಿಸತೊಡಗಿತು. ಆ ಮೇಲೆ ದೃಷ್ಟಿಯಾಯಿತೇನೋ ಎಂಬಂತೆ ಶ್ರೋತೃಗಳ ಸಂಖ್ಯೆ ಕಡಿಮೆಯಾಯಿತು. ವಿಷಯ ಪ್ರತಿಪಾದನೆ ತುಂಬಾ ಚೆನ್ನಾಗಿರುತ್ತದೆ ಎಂದು ಕೇಳುಗೆ ಅಭಿಪ್ರಾಯ. ಏಕೆ ಹೀಗೆ? ಬುದ್ಧನ ಪ್ರಸಂಗದಲ್ಲಿರುವಂತೆ ಕಾರಣಗಳನ್ನು ಇಲ್ಲಿಯೂ ಊಹಿಸಬಹುದು. ಆಗ ಕೆಲವು ಜನ ಹಿತೈಷಿಗಳು ಸೂಚಿಸಿದರು, ಸರ್ಕಾರಿ ಮಾಧ್ಯಮಿಕ ಶಾಲೆಯ ಮೈದಾನದಿಂದ ಹತ್ತಿರದಲ್ಲೇ ಇರುವ ಬಸವ ಮಂಟಪದಲ್ಲಿ ಪ್ರವಚನ ಮುಂದುವರಿಸ ಬಹುದು. ಇಲ್ಲವೇ ಜನರಲ್ಲಿ ಆಸಕ್ತಿ ಇಲ್ಲವೆಂದು ತಿಳಿಸಿ ಮಂಗಲ ಮಾಡಿಬಿಡುವುದು.

ಪೂಜ್ಯ ಗಂಗಾಮಾತಾಜಿ ಒಪ್ಪಲಿಲ್ಲ. ಪ್ರವಚನ ಕಾಯಕವು ಒಂದು ವ್ರತದಂತೆ! ಎಷ್ಟೇ ಜನ ಸೇರಲಿ ನಾನು ಪ್ರವಚನ ಕಾಯಕ್ರಮ ಮುಂದುವರಿಸುತ್ತೇನೆ, ಗುರು ಬಸವಣ್ಣನವರು ಒಡ್ಡಿದ ಪರೀಕ್ಷೆ ಏನೋ ಆದರಲ್ಲಿ ಪೂಜ್ಯ ಗಂಗಾ ಮಾತಾಜಿ ಪರೀಕ್ಷೆಯಲ್ಲಿ ತೇರ್ಗಡೆಯಾದರೋ ಎಂಬಂತೆ ಕೆಲವೇ ದಿನಗಳಲ್ಲಿ ಶ್ರೋತೃಗಳ ಸಂಖ್ಯೆ ವೃದ್ಧಿಯಾಯಿತು. ದಿನದಿನಕ್ಕೆ ಅಭಿವೃದ್ಧಿಯಾಗಿ 42 ದಿವಸಗಳ ಕಾಲ ಜರುಗಿ ದಿ. 21-3-2010ರಂದು ಅದ್ದೂರಿಯ ಮೆರವಣಿಗೆಯೊಡನೆ ಕಾರ್ಯಕ್ರಮವು ಮಂಗಲಗೊಂಡಿತು.

ಬುದ್ಧನ ಕಳಕಳಿ, ಭರವಸೆ ಮನೋಜ್ಞವಾದಂತೆ ಪೂಜ್ಯ ಗಂಗಾ ಮಾತಾಜಿಯವರ ಕಳಕಳಿ, ಸಹನೆ ಈ ದೃಷ್ಟಾಂತ ಕಥೆಯನ್ನು ಓದಿದಾಗ ಅರ್ಥವಾಗಿ ಮೆಚ್ಚುಗೆ ಮೂಡಿತು.

ಚಿತ್ರದುರ್ಗ ನಗರದಲ್ಲಿ ಅಭೂತ ಪೂರ್ವ ಪ್ರವಚನ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಹುಟ್ಟೂರು ಚಿತ್ರದುರ್ಗ ಒಂದು ಐತಿಹಾಸಿಕ ಸ್ಥಳ; ಏಳು ಸುತ್ತಿನ ಕೋಟೆ, ವೀರ ಮದಕರಿ ನಾಯಕನ ಪರಾಕ್ರಮ, ವೀರವನಿತೆ ಒನಕೆ ಓಬವ್ವನ ಶೌರ್ಯ ಚಿತ್ರದುರ್ಗದ ಕೀರ್ತಿಯನ್ನು ದಿಗಂತದಲ್ಲಿ ಪಸರಿಸಿವೆ. ಚಿನ್ನದ ಹೂವಿಗೆ ಸುವಾಸನೆ ಬಂದಂತೆ ಈ ಚಿನ್ಮೂಲಾದ್ರಿಯ ಕೀರ್ತಿಯು ಮತ್ತಷ್ಟು ಬೆಳಗಿದುದು ಪೂಜ್ಯ ಮಾತಾಜಿಯವರಿಂದ. ಪೂಜ್ಯ ಮಾತಾಜಿ ಜನಿಸಿದುದು ಚಿತ್ರದುರ್ಗ ಬಳಿಯ ಗ್ರಾಮ ಸಾಸಲಹಟ್ಟಿಯಲ್ಲಿ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳನ್ನು ಸರ್ಕಾರಿ ಶಾಲೆಗಳಲ್ಲಿ, ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎಸ್ಸಿ ಪೂರೈಸಿದರು. ಇಂತಹ ಚಿತ್ರದುರ್ಗದ ಸರ್ಕಾರಿ ಮಾಧ್ಯಮಿಕ ಶಾಲೆಯ ಮೈದಾನದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ.6-2-2010 ರಂದು ವಿಶ್ವಧರ್ಮ ಪ್ರವಚನವನ್ನು ಪ್ರಾರಂಭಿಸಿದರು. ವಿಧಾನ ಪರಿಷತ್ ಸದಸ್ಯರಾದ ತಿಪ್ಪಾರೆಡ್ಡಿ ಉದ್ಘಾಟಿಸಿದರು. ಶರಣ. ಬೋರಪ್ಪ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಶಿವರಾತ್ರಿಯಂದು ಬೆಳಿಗ್ಗೆ 10-30ಕ್ಕೆ ಸಾಸಲಹಟ್ಟಿ ಗ್ರಾಮದ ಅಕ್ಕಮಹಾದೇವಿ ಮಠದಲ್ಲಿ ಗಣಮೇಳವನ್ನು, ರಾತ್ರಿ ಚಿತ್ರದುರ್ಗದ ಪ್ರವಚನ ವೇದಿಕೆಯಿಂದ ವಿಶೇಷ ಕಾರ್ಯಕ್ರಮವನ್ನು ನಡೆಸಲಾಯಿತು.

ದಿ. 13-3-10ರಂದು ರಂಗಯ್ಯನ ಬಾಗಿಲು ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಪೂಜ್ಯ ಮಾತಾಜಿಯವರ ಆರೋಗ್ಯಭಾಗ್ಯಕ್ಕಾಗಿ ಪ್ರಾರ್ಥಿಸಿ ಪೂಜ್ಯ ಮಾತೆ ಗಂಗಾದೇವಿಯವರು ಸಹಸ್ರ ಪುಷ್ಪಾರ್ಚನೆ ಸಹಸ್ರ ಮಂತ್ರ ಪಠಣವನ್ನು ಮಾಡಿ, ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸಿದರು. ಸಂಜೆ ವೇದಿಕೆಯ ಮೇಲೆ ಪೂಜ್ಯ ಮಾತಾಜಿಯವರ 65ನೆಯ ವರ್ಧಂತಿ ಆಚರಿಸಲಾಯಿತು. ಹಿರಿಯ ನ್ಯಾಯವಾದಿಗಳಾದ ಕೊಟ್ರಪ್ಪನವರು, ವಕೀಲ ಸಂಘದ ಅಧ್ಯಕ್ಷರಾದ ನಾಯಕ ಅವರು, ಪ್ರೊ.ಗಂಗಾಧರಯ್ಯ ಅತಿಥಿಗಳಾಗಿ ಆಗಮಿಸಿದ್ದರು.

42 ದಿವಸಗಳ ಕಾಲ ನಡೆದ ಪ್ರವಚನವು ದಿ. 21-3-2010 ದೇವ(ಭಾನು)ವಾರದಂದು ಮುಕ್ತಾಯಗೊಂಡಿತು. ಬೆಳಿಗ್ಗೆ 10-30ಕ್ಕೆ ಚಿತ್ರದುರ್ಗ ರಾಷ್ಟ್ರೀಯ ಬಸವ ದಳದ 23ನೆಯ ವಾರ್ಷಿಕೋತ್ಸವ ಆಚರಿಸಲಾಯಿತು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ವೀರಣ್ಣ ಲಿಂಗಾಯತ್ ಉದ್ಘಾಟಿಸಿದರು. ಬಸವ ಮಂಟಪ ಕಟ್ಟಲು ಶ್ರಮಿಸಿದ ನಿಷ್ಠಾವಂತ ಶರಣರಾದ ಬಿ.ವಿ.ಸತ್ಯನಾರಾಯಣ ಶೆಟ್ಟರು, ಜೆ.ಬಸಪ್ಪನವರು, ವೀರಬಸಪ್ಪ ಜಂತ್ರಿ, ಎಸ್.ಲಿಂಗಣ್ಣ, ಡಾ|| ಸದಾಶಿವಗೌಡ ಅವರು ಲಿಂಗೈಕ್ಯರಾಗಿದ್ದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವಿವಿಧ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳು, ಸದಸ್ಯರು ಕಾರ್ಯಕ್ರಮದಲ್ಲಿ ಭಾಗಿಗಳಾದರು. ಜಿ.ಸಿ.ಮನೋಹರ ಅವರು ಪ್ರಸಾದ ದಾಸೋಹದ ವ್ಯವಸ್ಥೆ ಮಾಡಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಭಕ್ತಿ- ವೈಭವ ಪೂರ್ವಕವಾಗಿ ಬರಮಾಡಿಕೊಳ್ಳಬೇಕು ಎಂಬ ಹಂಬಲ ವೀರಮದಕರಿ ನಾಯಕ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶರಣ. ಡಿ. ಬೋರಪ್ಪನವರದು. ಊರಿನ ಗಣ್ಯರಾದ ಅವರು ಈ ವರ್ಷದ ವ್ಯಕ್ತಿ ಎಂಬ ಸನ್ಮಾನಕ್ಕೂ ಪಾತ್ರರಾದವರು. ಚಿತ್ರದುರ್ಗದ ಕೋಟೆಯ ದ್ವಾರದಲ್ಲಿ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸಿ, ಅಲಂಕರಿಸಿದ ಟ್ರ್ಯಾಕ್ಟರ್ ಮೇಲೆ ಉಭಯ ಮಾತಾಜಿಗಳನ್ನು ಕುಳ್ಳಿರಿಸಿ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು. ಸ್ಥಳೀಯರು ಮತ್ತು ವಿವಿಧ ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು, ಮದಕರಿ ನಾಯಕ ವಿದ್ಯಾಸಂಸ್ಥೆಯ ಕ್ರೀಡಾಪಟುಗಳು ಮೆರವಣಿಗೆಗೆ ಶೋಭೆ ತಂದರು. ಮೆರವಣಿಗೆಯು ದೊಡ್ಡ ಪೇಟೆ, ಮುಖ್ಯ ಪೇಟೆ, ಬೆಂಗಳೂರು-ದಾವಣಗೆರೆ ರಸ್ತೆಯಲ್ಲಿ ಜಯಘೋಷಗಳ ನಡುವೆ ಸಾಗಿ, ವೀರ ಮದಕರಿ ನಾಯಕ ವೃತ್ತದ ಸನಿಹದಲ್ಲಿರುವ ತರಾಸು ರಂಗ ಮಂದಿರದಲ್ಲಿ ಮೆರವಣಿಗೆಯು ಮುಕ್ತಾಯಗೊಂಡಿತು.

ಅಭಿನಂದನ ಕಾರ್ಯಕ್ರಮ

1987ರಲ್ಲಿ ಪೂಜ್ಯ ಮಾತಾಜಿಯವರ ಹುಟ್ಟು ಹಬ್ಬವನ್ನು ಚಿತ್ರದುರ್ಗದಲ್ಲಿ ಆಚರಿಸಿದ್ದು 23 ವರ್ಷಗಳ ನಂತರ ಪುನಃ ವೈಭವ ಪೂರ್ಣವಾಗಿ ತರಾಸು ರಂಗ ಮಂದಿರಲ್ಲಿ ಪೂಜ್ಯರಿಗೆ ಅಭಿನಂದನ ಸಮಾರಂಭವನ್ನು ಏರ್ಪಡಿಸಲಾಗುತ್ತು. ಡಿ. ಬೋರಪ್ಪ -ಯಶೋದ ದಂಪತಿಗಳು ಮಾತಾದ್ವಯರಿಗೆ ಸೀರೆಗಳನ್ನು ಶಾಲನ್ನು ಹೊದ್ದಿಸಿ ಸತ್ಕರಿಸಿದರು. ಮದಕರಿನಾಯಕ ವಿದ್ಯಾಸಂಸ್ಥೆಯ ಅಂಗ ಸಂಸ್ಥೆಗಳ ಮುಖ್ಯಸ್ಥರು ಮಾಲಾರ್ಪಣೆ ಮಾಡಿದರು. ಶರಣ ಬಂಧುಗಳು ಮಾಲಾರ್ಪಣೆ ಮಾಡಿ, ಆರತಿಯನ್ನು ಬೆಳಗಿದರು. ಚಿತ್ರದುರ್ಗ ನಾಗರಿಕರ ಪರವಾಗಿ ಸನ್ಮಾನ ಪತ್ರವನ್ನು ಪ್ರಾಂಶುಪಾಲ ಡಾ|| ಬಸಪ್ಪನವರು ಅರ್ಪಿಸಿದರು. ಅಭಿನಂದನೆಗೆ ಪ್ರತಿಕ್ರಿಯೆ ನೀಡಿದ ಮಾತಾಜಿ ತಮ್ಮ ಭಾಷಣದಲ್ಲಿ ಹೇಳಿದರು, "ಏನೆಲ್ಲ ಭಕ್ಷ್ಯ ಭೋಜ್ಯಗಳು ದೊರೆತರೂ ಬಾಲ್ಯದಲ್ಲಿ ತಾಯಿ ಕೊಡುವ ಕೈ ತುತ್ತಿನ ರುಚಿ ಹೇಗೆ ಚೆನ್ನಾಗಿರುವುದೋ ಹಾಗೆ ಬೇರೆ ಕಡೆ ಏನೇ ಸನ್ಮಾನ ಸತ್ಕಾರ ನಡೆದರೂ, ಹುಟ್ಟೂರಿನ ಅಭಿನಂದನೆ ಎಲ್ಲಕ್ಕೂ ಹೆಚ್ಚು ಮಹತ್ವಪೂರ್ಣ." ಎಂದು ಹರ್ಷಿಸಿದರು. "ತಾವು ಗುರಿ ಇಟ್ಟುಕೊಂಡು ಮನೆ ಬಿಟ್ಟು, ಆ ಗುರಿ ಎಡೆಗೇ ಸಾಗಿದ ಸಂತೃಪ್ತಿ ತಮಗಿದೆ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಕೊಟ್ಟೂರು ಶಾಸಕ ವೀರಭದ್ರಪ್ಪ, ವಕೀಲ ಸಂಘದ ಅಧ್ಯಕ್ಷ ನಾಯಕ್, ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಈ.ಆರ್.ಕೊಟ್ರಪ್ಪ ಇನ್ನಿತರರು ಭಾಗವಹಿಸಿದ್ದರು. ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಧನರಾಜ್ ಜೀರಗೆ, ಬೀದರ್ ರಾಷ್ಟ್ರೀಯ ಬಸವ ದಳದ ಪ್ರಮುಖರಾ ದ ಗಂಗಶೆಟ್ಟಿ ಪಾಟೀಲ್, ಶಿವರಾಜ ಪಾಟೀಲ್ ಅತಿವಾಳ ಉಪಸ್ಥಿತರಿದ್ದರು. ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ, ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮೀಜಿ ಸನ್ನಿಧಿ ವಹಿಸಿದ್ದರು. ಬಸವ ಕಲ್ಯಾಣದ ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ ಬಸವ ಧ್ವಜಾರೋಹಣ ಮಾಡಿದರು. ಪೂಜ್ಯ ಮಾತಾಜಿಯವರ ತಾಯಿ ಶರಣೆ. ವನಜಾಕ್ಷಮ್ಮನವರನ್ನು, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯವರಾದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರ ತಾಯಿ ತಂದೆಗಳಾದ ರತ್ನಮ್ಮ ಮತ್ತು ಚಲಮಪ್ಪ ಅವರನ್ನು ಶಾಲು ಹೊದ್ದಿಸಿ ಗೌರವಿಸಲಾಯಿತು. ವಿಶ್ವಧರ್ಮ ಪ್ರವಚನ ಮತ್ತು ಅಭಿನಂದನ ಕಾರ್ಯಕ್ರಮಕ್ಕಾಗಿ ಶ್ರಮಿಸಿದ ಕಾರ್ಯಕರ್ತರನ್ನು ಸತ್ಕರಿಸಲಾಯಿತು.

- ವರದಿ : ಕರಿಬಸಪ್ಪ ಕೋರಿಶೆಟ್ಟರು

ನಗ್ನ ಸತ್ಯ — ಮುನಿಶ್ರೀ ತರುಣ ಸಾಗರ್ ಜಿ

ಕ್ರೋಧದ ಕುಟುಂಬವಿದು

ಕ್ರೋಧಕ್ಕೆ ತನ್ನದೇ ಆದ ಪೂರ್ಣ ಕುಟುಂಬವಿದೆ. ಕ್ರೋಧದ ಒಬ್ಬ ಮುದ್ದಿನ ಸಹೋದರಿಯಿದ್ದಾಳೆ, ಹಠ. ಆಕೆ ಸದಾ ಕ್ರೋಧದ ಜತೆಯಲ್ಲೇ ಇರುತ್ತಾಳೆ. ಕ್ರೋಧದ ಪತ್ನಿ ಹಿಂಸೆ. ಆಕೆ ಸದಾ ಹಿಂದೆ ಅವಿತಿರುತ್ತಾಳೆ. ಆದರೆ ಯಾವಾಗಲಾದರೊಮ್ಮೆ ಸದ್ದು ಕೇಳಿ ಹೊರಗೆ ಬಂದುಬಿಡುತ್ತಾಳೆ. ಕ್ರೋಧದ ಹಿರಿಯ ಸೋದರನ ಹೆಸರು ಅಹಂಕಾರ. ಕ್ರೋಧಕ್ಕೆ ತಂದೆಯೂ ಇದ್ದಾನೆ. ಆತನ ಹೆಸರು ಭಯ. ನಿಂದನೆ ಮತ್ತು ಚಾಡಿ ಕ್ರೋಧಕ್ಕೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಒಬ್ಬಳು ಬಾಯಿ ಹತ್ತಿರ ಇರುತ್ತಾಳೆ. ಎರಡನೆಯವರು ಕಿವಿಯ ಹತ್ತಿರ ಇರುತ್ತಾಳೆ. ವೈರತ್ವ ಎನ್ನುವುದು ಆತನ ಪುತ್ರ. ಈರ್ಷೆ ಎಂಬುದು ಈ ಮನೆತನದ ಜಂಬದ ಸೊಸೆ. ಈ ಕುಟುಂಬದಲ್ಲಿ ಮೊಮ್ಮಗುವೂ ಇದೆ. ಆಕೆಯ ಹೆಸರು ಜುಗುಪ್ಸೆ. ಮೂಗಿನ ಹತ್ತಿರ ಇರುತ್ತದೆ. ಮೂಗಿನ ಹೊಳ್ಳೆಗಳು ಮೇಲೆ ಕೆಳಗೆ ಆಡುವಂತೆ ಮಾಡುವುದು ಇದರ ಕೆಲಸ.

(ವಿ.ಕ. ದಿ. 30-3-2010)

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದ ಮೇಲೆ

108 ಅಡಿ ಗುರು ಬಸವಣ್ಣನವರ ಪುತ್ಥಳಿ

ಧನ ಸಹಾಯಕ್ಕಾಗಿ ಬಿನ್ನಹ



ಬಸವ ಧರ್ಮ ಪೀಠದ ಶರಣ ಲೋಕದಲ್ಲಿ ತ್ವರಿತಗತಿಯಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಗಿರುವುದು ಸರ್ವ ವೇದ್ಯವಷ್ಟೆ. ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಕೆಲಸವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪೂರೈಸಿದ್ದು ಇನ್ನು ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

1. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಅಲ್ಲದೆ ದಾನಿಗಳ ಅಥವಾ ಅವರು ಸೂಚಿಸಿದವರ ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.
2. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನ ಮೇಲೆ ಬರೆಸಲಾಗುವುದು.

ಈಗಾಗಲೇ ಅನೇಕರು ತಮ್ಮ ಶಕ್ತ್ಯಾನುಸಾರ ದೇಣಿಗೆ ಕೊಟ್ಟಿರಬಹುದು. ಕೆಲಸವು ಹಾಕಿಕೊಂಡ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಸಾಗುತ್ತಿರುವುದರಿಂದ ಈಗ ಕೊಟ್ಟವರು ಇನ್ನೂ ಹೆಚ್ಚಿನ ಮೊತ್ತವನ್ನು ಕೊಡಬಹುದು. ಮೂರ್ತಿಗೆ ಆಕಾರ ಕೊಡುವ ಕೆಲಸ ನಡೆದಿರುವುದರಿಂದ ಹಣವು ತ್ವರಿತಗತಿಯಲ್ಲಿ ಬೇಕಾಗಿದೆ.

ಸ್ವಯಂ ಪ್ರೇರಣೆಯಿಂದ ಕಟ್ಟಡ ನಿಧಿಗೆ ಶಕ್ತ್ಯಾನುಸಾರ ಮತ್ತು ಭಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು.

108 ಸೋಪಾನದ ಯೋಜನೆ

ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಮುಂಭಾಗದಲ್ಲಿ ಏರಲು, ಇಳಿಯಲು ಮೆಟ್ಟಿಲನ್ನು ಮಾಡಲಾಗುತ್ತಿದೆ. ಏರಲು 108 ಇಳಿಯಲು 108 ಹೀಗೆ ಒಟ್ಟು 216 ಸೋಪಾನ ಗಳಾಗುತ್ತವೆ. ಆಳತೆ 10 ಅಡಿ ಉದ್ದ, 8 ಅಂಗುಲ ಎತ್ತರ, 1 ಅಡಿ ಅಗಲ, ಈ ಮೆಟ್ಟಿಲುಗಳಿಗೆ ಗ್ರಾನೈಟನ್ನು ಹಾಕಿಸುವ ಅಪೇಕ್ಷೆ ಇದೆ. 8 ಅಂಗುಲ ಎತ್ತರದ ಕಲ್ಲಿನ ಮೇಲೆ ದಾನಿಗಳ ಹೆಸರನ್ನು ಕೆತ್ತಿಸಲಾಗುವುದು. ಈ ಸೋಪಾನ ಯೋಜನೆಗೆ ಒಂದು ಮೆಟ್ಟಿಲಿಗೆ 15000 (ಹದಿನೈದು ಸಾವಿರ) ಕೊಟ್ಟರೆ ಧನ ದಾಸೋಹಿಗಳ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗ ಬೇಕೆಂದು ಕೋರುತ್ತೇವೆ.

ನವಲಿಂಗ ಸ್ಥಾವರ

ಏರುವ ಮತ್ತು ಇಳಿಯುವ ಮೆಟ್ಟಿಲಿನ ಮಧ್ಯೆ ಸುಂದರವಾದ ನವಲಿಂಗ ಸ್ಥಾವರವನ್ನು ನಿರ್ಮಿಸಲಾಗುತ್ತಿದೆ. ಒಂಬತ್ತು ಕಟ್ಟೆಗಳ ಮೇಲೆ 9 ಕಮಲದ ಹೂವುಗಳು ಅರಳಲಿದ್ದು, ಆ ಹೂವುಗಳ ಮೇಲೆ 9 ಮಂಟಪಗಳ ನಿರ್ಮಾಣವಾಗಲಿದೆ. ಅವುಗಳಲ್ಲಿ 9 ಜನ ಶರಣರ ಮೂರ್ತಿಗಳನ್ನು ಇಡಲಾಗುವುದು.

ಶೂನ್ಯ ಪೀಠ ಪರಂಪರೆಯನ್ನು ಬಿಂಬಿಸಲಿರುವ ಈ ನವಲಿಂಗ ಸ್ಥಾವರದಲ್ಲಿ ಕೂರಿಸಲಾಗುವ 9 ಮೂರ್ತಿಗಳೆಂದರೆ, ಮೇಲಿನಿಂದ ಕೆಳಕ್ಕೆ

1. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು
2. ವೀರ ವಿರಾಗಿಣಿ ಅಕ್ಕಮಹಾದೇವಿ
3. ಚಿನ್ಮಯ ಜ್ಞಾನಿ ಚನ್ನಬಸವಣ್ಣ
4. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರ
5. ವೈರಾಗ್ಯನಿಧಿ ಮಲೆಯ ಮಾದೇಶ್ವರ
6. ನಿರಂಜನ ಮೂರ್ತಿ ಮನ್ಮಥಸ್ವಾಮಿ (ಮಹಾರಾಷ್ಟ್ರ)
7. ಯಡೆಯೂರು ಸಿದ್ಧಲಿಂಗೇಶ್ವರ
8. ಜೇವರ್ಗಿಯ ಷಣ್ಮುಖ ಶಿವಯೋಗಿ
9. ಬಸವ ಕಂದ ಲಿಂಗಾನಂದ ಸ್ವಾಮಿಗಳು

ನಂತರ ಎರಡೂ ಬದಿಯಲ್ಲಿ ಅಶ್ವಾರೂಢರಾಗಿರುವ ವಚನ ಸಾಹಿತ್ಯ ಸಂರಕ್ಷಕರಾದ ವೀರ ಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ವೀರ ಮಾತೆ ಅಕ್ಕನಾಗಲಾಂಬಿಕೆಯ ಮೂರ್ತಿಗಳು.

ನವ ಲಿಂಗ ಸ್ಥಾವರದ ಕಟ್ಟೆ, ಕಮಲ ಮಂಟಪ ಮತ್ತು ಶರಣರ ಮೂರ್ತಿ - ಎಲ್ಲಾ ಸೇರಿ ಒಂದೊಂದಕ್ಕೆ 4 ಲಕ್ಷ ರೂ ವೆಚ್ಚವಾಗುತ್ತದೆ. ಒಬ್ಬರು ಅಥವಾ ಇಬ್ಬರು ಭರಿಸಿದರೆ ದೊಡ್ಡದಾಗಿ ಹೆಸರು ಬರುತ್ತದೆ. ಇಲ್ಲದಿದ್ದರೆ ತಲಾ 50,000 (ಐವತ್ತು ಸಾವಿರ) ರೂ ಕೊಟ್ಟ 8 ಜನ ದಾನಿಗಳ ಹೆಸರಿನ ನಾಮಫಲಕಗಳನ್ನು ಗ್ರಾನೈಟಿನಲ್ಲಿ ಕೆತ್ತಿಸಿ ಒಂದೊಂದು ಹಂತಕ್ಕೆ ಹಾಕಲಾಗುವುದು.

ಕಲ್ಲಿನ ಬಾಗಿಲ ಚೌಕಟ್ಟು

ಲ್ಯಾಟರೈಟ್ ಕಲ್ಲಿನಲ್ಲಿ ಕೊರೆಸಲ್ಪಟ್ಟ ಬೃಹತ್ ಗವಿಯು ಅದ್ಭುತವಾಗಿ ಮೂಡಿ ಬಂದಿದ್ದು ಅದರ ಒಳಗೆ ಪುನಃ ಕೋವಿ(ಒಳ ಸುರಂಗ)ಗಳನ್ನು ಮಾಡಿ ಪ್ರಮುಖ ಶರಣ-ಶರಣೆಯರ ಮೂರ್ತಿಗಳನ್ನು ಕೂರಿಸಲಾಗಿದೆ. ಇನ್ನೂ ಕೆಲವು ಮೂರ್ತಿಗಳನ್ನು ಕೂರಿಸಿರುವ (ಮತ್ತು ಕೂರಿಸಲಿರುವ) ಸುರಂಗಗಳಿಗೆ ಕಲ್ಲಿನ ಬಾಗಿಲ ಚೌಕಟ್ಟನ್ನು ಶಿಲ್ಪಿಗಳಿಂದ ಕೆತ್ತಿಸಲಾಗಿದೆ; ಮತ್ತು ಕೆತ್ತಿಸಲಾಗುತ್ತಿದೆ. ಇಂಥ ಬಾಗಿಲ ಚೌಕಟ್ಟು ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ಆಗುತ್ತದೆ.

ಇದಕ್ಕೆ ಕೊಡುವ ದಾನಿಗಳಿಗೆ ಬಾಗಿಲ ಚೌಕಟ್ಟಿನ ಮೇಲೆ ಹೆಸರನ್ನು ಕೆತ್ತಿಸಲಾಗುತ್ತದೆ. ಇಂಥ ಬಾಗಿಲ ಚೌಕಟ್ಟುಗಳು ಕೇವಲ 20 ಮಾತ್ರ ಇವೆ. ಆದ್ದರಿಂದ ಧನ ದಾಸೋಹಿಗಳು ಬೇಗನೆ ತಮ್ಮ ಹೆಸರನ್ನು ತಿಳಿಸಬೇಕು.

ವಿ.ಸೂ : ಈ ಯೋಜನೆಗಳನ್ನು ಘೋಷಿಸುವ ಮೊದಲು (1-2-2010) ಅನೇಕರು 25000(ಇಪ್ಪತ್ತೈದು ಸಾವಿರ) ಮತ್ತು 15000 (ಹದಿನೈದು ಸಾವಿರ) ರೂಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಅವರು ಈ ಹಣವನ್ನು ಬಾಗಿಲ ಚೌಕಟ್ಟಿಗೆ ಮೆಟ್ಟಿಲು ಯೋಜನೆಗೆ ಬಳಸಿಕೊಳ್ಳಿರಿ ಎಂದು ತಿಳಿಸಬಾರದು. ಏಕೆಂದರೆ ಆ ಹಣವನ್ನು ಬೃಹತ್ ಮೂರ್ತಿಯ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ. ಈ ಯೋಜನೆಗೆ ಕೊಡಬೇಕೆನ್ನುವವರು ಹಣಕೊಡುವಾಗಲೇ ಉದ್ದೇಶವನ್ನು ತಿಳಿಸಬೇಕು.

ಶರಣ ಬಂಧುಗಳು ಲಕ್ಷ್ಯ ಕೊಟ್ಟು ಓದಿ ತಮ್ಮ ಶಕ್ತ್ಯಾನುಸಾರ ಯೋಜನೆಯನ್ನು ಆಯ್ಕೆ ಮಾಡಿಕೊಂಡು, ದೇಣಿಗೆಯನ್ನು ಕೊಟ್ಟು ಸಹಕರಿಸಬೇಕೆಂದು ಕೋರುತ್ತೇವೆ.

ಗುರು ಬಸವಣ್ಣನವರ ಜೀವನ ಚರಿತ್ರೆ, ಚಿತ್ರಣ

1. ಗುರು ಬಸವಣ್ಣನವರ 108 ಅಡಿ ಪುತ್ಥಳಿಗೆ 24 ಅಡಿ ಎತ್ತರದ ಅಡಿಪಾಯವಿದೆ. ಇಲ್ಲಿ ಧರ್ಮಪಿತರ ಜೀವನದ ಪ್ರಮುಖ ಘಟ್ಟಗಳನ್ನು ಮೂರ್ತಿಗಳ ಮೂಲಕ ಚಿತ್ರಿಸುವ ಯೋಜನೆ ಇದೆ. ಒಂದು ಅಂಕಣದಲ್ಲಿ ಒಂದು ಘಟನೆ ಅಥವಾ ಪ್ರಸಂಗವಿರುತ್ತದೆ. ಒಂದೊಂದು ಘಟನೆಯ ಚಿತ್ರಣಕ್ಕೆ ಒಂದೂವರೆ ಲಕ್ಷ ಖರ್ಚು ಬರಲಿದೆ. (ಮುರ್ಡೇಶ್ವರದಲ್ಲಿ ರಾವಣನ ಜೀವನದ ಪ್ರಸಂಗಗಳು, ಶಿವನ ಲೀಲೆಗಳನ್ನು ಚಿತ್ರಿಸಿರುವುದು ನಮ್ಮ ಯೋಜನೆಗೆ ಪ್ರೇರಣೆ) ಇದನ್ನು ಒಬ್ಬರೇ ದಾನಿಗಳು ವಹಿಸಿಕೊಳ್ಳಬಹುದು. ಅಥವಾ ಇಬ್ಬರು - ಮೂವರು ಸೇರಿ ವಹಿಸಿಕೊಳ್ಳಬಹುದು. ಅಥವಾ ಒಂದೊಂದು ರಾಷ್ಟ್ರೀಯ ಬಸವ ದಳದಿಂದ ಅಥವಾ ಒಂದೊಂದು ಊರಿನಿಂದ ಸಂಗ್ರಹಿಸಿ ದೇಣಿಗೆ ನೀಡಬಹುದು.

2. ಶರಣ ಗ್ರಾಮ: ವಿವಿಧ ಕಾಯಕದ ಶರಣರನ್ನು ಅವರ ಪರಿಸರದ ಜೊತೆಗೆ ಚಿತ್ರಿಸುವ ಕೆಲಸ ಆರಂಭವಾಗಿದೆ. ಒಬ್ಬ ಶರಣರ ಅಂಥ ಚಿತ್ರಣಕ್ಕೆ ಅಂದಾಜು 50,000 (ಐವತ್ತು ಸಾವಿರ) ರೂ ವೆಚ್ಚವಾಗುವುದು. ಕೊಟ್ಟವರ ಹೆಸರಿನ / ಊರಿನ ನಾಮಫಲಕವನ್ನು ಹಾಕಲಾಗುವುದು.

3. ಅಕ್ಕಮಹಾದೇವಿ ಗವಿ : ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಒಂದು ಬೃಹತ್ ಗವಿಯನ್ನು ಕೆತ್ತಿಸಲಾಗಿದ್ದು, ಇದರಲ್ಲಿ 30 ಜನ ವಚನಕಾರ್ತಿ ಶರಣೆಯರ ಮೂರ್ತಿಗಳನ್ನು ಕೂರಿಸುವ ಉದ್ದೇಶವಿದೆ. ಒಬ್ಬೊಬ್ಬ ಶರಣೆಯ ಮೂರ್ತಿಯನ್ನು ಆಕೆಯ ಪರಿಸರದೊಡನೆ ಚಿತ್ರಿಸಲು 25,000 (ಇಪ್ಪತ್ತೈದು ಸಾವಿರ) ರೂಗಳ ವೆಚ್ಚ ತಗುಲಲಿದೆ. ದಾನಿಗಳು ದೇಣಿಗೆ ಕೊಟ್ಟರೆ ಅಲ್ಲಿ ಅವರ ಹೆಸರಿನ ನಾಮಫಲಕವನ್ನು ಹಾಕಲಾಗುವುದು.

4. ಸರೋವರ : ಗುರು ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಒಂದು ಕೊಳವನ್ನು (ಅಂದಾಜು ವೆಚ್ಚ 5 ಲಕ್ಷ) ಮಾಡಿ, ಐಕ್ಯ ಮಂಟಪವನ್ನು (ಅಂದಾಜು ವೆಚ್ಚ 3 ಲಕ್ಷ) ನಿರ್ಮಿಸಲಾಗುತ್ತಿದೆ. ಇಡೀ ವೆಚ್ಚವನ್ನು ಒಬ್ಬರೇ ವಹಿಸಿಕೊಳ್ಳಬಹುದು. ಅಥವಾ ಇಬ್ಬರು ಪ್ರತ್ಯೇಕವಾಗಿ ವಹಿಸಿಕೊಳ್ಳಬಹುದು.

ಸಾಲದ ರೂಪದಲ್ಲಿ ಧನ ಸಹಾಯ

ಬೃಹತ್ ಪುತ್ಥಳಿಯ ಕೆಲಸವು ಬಹು ತೀವ್ರಗತಿಯಲ್ಲಿ ನಡೆದಿರುವ ಕಾರಣ ಹಣದ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ. ಈ ಹಿಂದೆ 2006ರಲ್ಲಿ ನವ ದೆಹಲಿಯಲ್ಲಿ (ಬಸವ ಮಂಟಪ) ಕಟ್ಟಡ ಖರೀದಿ ಮಾಡುವಾಗ ಶರಣ ಬಂಧುಗಳು ಸಾಲ ರೂಪದಲ್ಲಿ ಹಣವನ್ನು ಒದಗಿಸಿದರು. ಒಂದೂವರೆ ತಿಂಗಳಲ್ಲೇ ಸಾಲ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ಖರೀದಿಸಲಾಯಿತು. ಆ ಸಾಲದಲ್ಲಿ ಶೇಕಡಾ 80ರಷ್ಟು ತೀರಿಸಲಾಗಿದೆ. ಶರಣ ಬಂಧುಗಳ ಇಚ್ಛೆಯಂತೆ ಉಳಿದುದನ್ನು ಅವರು ಕೇಳಿದಾಗ ಕೊಡಲಾಗುವುದು. ಅದೇ ರೀತಿ ಈಗಲೂ ಶರಣ ಬಂಧುಗಳು ಸಾಲದ ರೂಪದಲ್ಲಿ ಬಸವ ಧರ್ಮ ಪೀಠ ಟ್ರಸ್ಟಿಗೆ ಹಣವನ್ನು ಕೊಡಬಹುದು. (ವಿ.ಸೂ: ಸಾಲದ ಹಣಕ್ಕೆ ರಸೀತಿ ಕೊಡಲಾಗುವುದು.) ಅದಕ್ಕೆ 12% ಬಡ್ಡಿಯನ್ನು ಸಹ ಕೊಡಲಾಗುವುದು. ತಮಗೆ ಹಣ ವಾಪಸ್ಸು ಬೇಕಾದಾಗ ಒಂದು ತಿಂಗಳು ಮೊದಲು ಬೇಡಿಕೆ ಸಲ್ಲಿಸಿದರೆ ವಾಪಸ್ಸು ನೀಡಲಾಗುವುದು. ಸಾಲ ನೀಡುವುದೂ ಸಹ ಉಪಕಾರದ ಕೆಲಸ ಎಂದು ಭಾವಿಸಿ, ಆರ್ಥಿಕ ಶಕ್ತಿ ಇರುವವರು ಸಾಲ ಕೊಡುವುದಕ್ಕೆ ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

ಬಸವ ಗಂಗೋತ್ರಿಯಲ್ಲಿ ಬಸವೋತ್ಸವ
- ಮೇ 25, 26 ಮತ್ತು 27ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತ್ರಿ ಆಶ್ರಮ" ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ|| ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ -ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ತ್ವ ತರಬೇತಿ ಶಿಬಿರವನ್ನು , ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದೆಯಾದರೂ ಈ ವರ್ಷದಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ವೈಶಾಖ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು - ಹೀಗೆ 3 ದಿವಸಗಳ ಸಮಾವೇಶವನ್ನು ಮೇ ತಿಂಗಳಿನ ದಿ. 25, 26 ಮತ್ತು 27ರಂದು ಸಂಯೋಜಿಸಲಾಗಿದೆ. ದಿ. 25ರಂದು ಬೆಳಿಗ್ಗೆ 10-30ರಿಂದ ಬಸವೋತ್ಸವದ ಉದ್ಘಾಟನಾ ಸಮಾವೇಶ, ಸಂಜೆ -5-30ರಿಂದ ಧರ್ಮ ಚಿಂತನ ಗೋಷ್ಠಿ. ದಿ. 26ರಂದು ಬೆಳಿಗ್ಗೆ 8-30ಕ್ಕೆ 770 ಜನ ಶರಣರಿಂದ ಇಷ್ಟಲಿಂಗ ಪೂಜೆ, 11-30ಕ್ಕೆ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ, ಸಂಜೆ -5-30ರಿಂದ ಧರ್ಮ ಚಿಂತನಗೋಷ್ಠಿ, ದಿ. 27 ಪೌರ್ಣಿಮೆಯಂದು ಜಗದ್ಗುರು ಶ್ರೀ ಚನ್ನಬಸವೇಶ್ವರ ಜ್ಞಾನ ಪೀಠ ಸ್ಥಾಪನೆ ಮತ್ತು ಪೀಠಾರೋಹಣ. ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಅವರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ; ನಂತರ ಸಮಾರೋಪ ಸಮಾರಂಭ.

ಪೂಜ್ಯ ರಾಮದೇವ ಬಾಬಾ ಅವರಿಂದ ತರಬೇತಿ ಪಡೆದ ಮೈಸೂರಿನ ಪತಂಜಲಿ ಯೋಗಾಲಯದ ಶರಣ. ಮಧು ಅವರು ಪ್ರತಿ ದಿನ ಬೆಳಿಗ್ಗೆ 5 ರಿಂದ 6-30ರವರೆಗೆ ಪ್ರಾಣಾಯಾಮ, ಧ್ಯಾನ, ಯೋಗಾಸನದ ತರಬೇತಿಯನ್ನು 3 ದಿವಸಗಳ ಕಾಲ ನೀಡಲಿದ್ದಾರೆ.

ದಿ. 24-5-2010ರಿಂದ ದಿ. 28-5-2010ರ ಬೆಳಗಿನವರೆಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಬರಲಿರುವ ಶರಣ ಬಂಧುಗಳಿಗೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕ ರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದದ ವ್ಯವಸ್ಥೆಯನ್ನು ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

770 ಅಮರ ಗಣಂಗಳ ಸ್ಮರಣಾರ್ಥ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಮೇಲೆ ತಿಳಿಸಿದಂತೆ ದಿ. 26ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದ್ದು ಪ್ರವೇಶ ಶುಲ್ಕ 100ರೂ. 250ರೂ ಮತ್ತು ಮೇಲೆ ಕೊಟ್ಟವರು ಇದಕ್ಕಾಗಿ ಪ್ರತ್ಯೇಕ ಶುಲ್ಕ ಕೊಡಬೇಕಾಗಿಲ್ಲ. ಇದರಿಂದ ಸಂಗ್ರಹವಾಗುವ ಹಣವನ್ನು ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ 108 ಅಡಿಯ ಬಸವ ಪುತ್ಥಳಿಗಾಗಿ ಬಳಸಲಾಗುವುದು.

ಬಸವೋತ್ಸವದ ಯಶಸ್ಸಿಗಾಗಿ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆಯನ್ನು ನೀಡುವುದಲ್ಲದೆ ರಸೀತಿ ಪುಸ್ತಕಗಳನ್ನು ಪಡೆದುಕೊಂಡು ದೇಣಿಗೆಯನ್ನು ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ -ಧಾನ್ಯ, ಅಕ್ಕಿ- ಬೇಳೆ, ಬೆಲ್ಲ -ಸಕ್ಕರೆ, ತರಕಾರಿ ಇತ್ಯಾದಿ ವಸ್ತುಗಳನ್ನು ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223,224,226 ರೂಟ್‌ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಬಳ್ಳಾರಿಯಲ್ಲಿ ಬಸವ ಮಂಟಪ ಉದ್ಘಾಟನೆ
ಬಸವ ಮೂರ್ತಿ ಪ್ರತಿಷ್ಠಾಪನೆ

ಬಳ್ಳಾರಿಯ ಬಸವೇಶ್ವರ ನಗರದ 2ನೇ ಕ್ರಾಸ್, 2ನೇ ಲಿಂಕ್ ರಸ್ತೆಯಲ್ಲಿ ರಾಷ್ಟ್ರೀಯ ಬಸವ ದಳದ ನಿವೇಶನವಿದ್ದು, ಇಲ್ಲಿ ಅತ್ಯಂತ ಸುಂದರವಾದ ಬಸವ ಮಂಟಪವು ಸಿದ್ಧವಾಗಿದೆ. ಪ್ರಸ್ತುತ ಬಸವ ಮಂಟಪದ ಉದ್ಘಾಟನೆ 2010ರ ಏಪ್ರಿಲ್ 25ರಂದು ನಡೆಯಲಿದೆ. ದಿ. 16ರಿಂದ ಒಂದು ವಾರ ಕಾಲ ಪೂಜ್ಯ ಶ್ರೀ ಮಾತೆ ಸತ್ಯಾದೇವಿ ಅವರ ಪ್ರವಚನ ಏರ್ಪಡಿಸಲಾಗಿದೆ. ಏಪ್ರಿಲ್ 23 ಮತ್ತು 24ರಂದು ಪೂಜ್ಯ ಮಾತಾಜಿಯವರ ವಿಶೇಷ ಪ್ರವಚನವಿದ್ದು, ದಿ. 25ರಂದು ಬೆಳಿಗ್ಗೆ ಮೂರ್ತಿಯ ಪ್ರತಿಷ್ಠಾಪನೆ ಇದೆ. ಬಂದವರಿಗೆ ವಸತಿ -ಪ್ರಸಾದದ ವ್ಯವಸ್ಥೆ ಇದೆ. ಹೆಚ್ಚಿನ ಜನ ಸಮಾವೇಶದಲ್ಲಿ ಭಾಗಿಗಳಾಗ ಬೇಕೆಂದು ಬಳ್ಳಾರಿ ರಾಷ್ಟ್ರೀಯ ಬಸವ ದಳದ ಶರಣರು ವಿನಂತಿಸಿದ್ದಾರೆ. ಬಳ್ಳಾರಿಯಿಂದ ಸಂಗನಕಲ್‌ಗೆ ಹೋಗುವ ರಸ್ತೆಯಲ್ಲಿ ಬರಬೇಕು.

ಸಂಪರ್ಕಿಸುವ ವಿಳಾಸ :

ಶರಣ. ರಾಮರೆಡ್ಡಿ
94498 59099

ಶರಣ. ರವಿಶಂಕರ್
ಮೊ: 9341033346

☹ ಸಮಸ್ಯೆ ? - ಸಮಾಧಾನ ! ☺

☐ ರಾಜಶೇಖರ ಪಾಟೀಲ, ಹುಬ್ಬಳ್ಳಿ

? ಕೆಲವು ಸ್ವಾಮಿಗಳು, ಗಣ್ಯರು ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳನ್ನು ಬಸವ ಧರ್ಮದ ಪುನರುತ್ಥಾರಕರೆಂದು ಬಹಳ ಕೊಂಡಾಡುತ್ತಾರೆ. ಆದರೆ ತಮ್ಮ ಹೆಸರನ್ನು ಮಾತ್ರ ಹೇಳುವುದಿಲ್ಲವಲ್ಲ ಏಕೆ?

★ ಪೂಜ್ಯ ಗುರುಗಳನ್ನು ಕೊಂಡಾಡಿದರೆ ನಮಗೂ ಹೆಮ್ಮೆ ಮತ್ತು ಸಂತೋಷ, ಇಷ್ಟು ತಡವಾಗಿಯಾದರೂ ಅರಿತರಲ್ಲ ಎಂದು. ನಮ್ಮ ಸಲುವಾಗಿ ನಿಮಗೆ ಇಷ್ಟೇಕೆ ಆತುರ? ಸತ್ತ ನಂತರ ನಮ್ಮನ್ನೂ ಕೊಂಡಾಡುತ್ತಾರೆ. ಇದು ನಮ್ಮ ದೇಶದ ವಿಶೇಷ ಸಂಪ್ರದಾಯ

☐ ಉದಯ ಕರ್ಜಗಿಮಠ, ಗೋಕಾಕ

1.? ಕಲ್ಯಾಣ ಕಿರಣದಲ್ಲಿ ಕಾಣಿಕೆಗಾಗಿ ಮನವಿ ಬರುತ್ತಲೇ ಇರುತ್ತದೆ. ಇದರಿಂದ ಕೆಲವರು ಹಣಕ್ಕಾಗಿ ಮಾತಾಜಿ ಬಹಳ ಆಸೆ ಪಡುತ್ತಾರೆ ಎಂದು ಟೀಕಿಸುತ್ತಾರಲ್ಲ.

★ ನಮ್ಮ ಸ್ನಾನ ಗೃಹದಲ್ಲಿ ನಾವು ಸ್ನಾನ ಮಾಡದೆ ಇನ್ನೊಬ್ಬರ ಮನೆಗೆ ಹೋಗಿ ಸ್ನಾನ ಮಾಡಲು ಬರುವುದೆ? ಕಲ್ಯಾಣ ಕಿರಣ ಬಸವ ಧರ್ಮ ಪೀಠದ ಮುಖವಾಣಿ. ನಮ್ಮ ಸಂತೋಷ -ವಿಷಾದ, ಸುಖ -ದುಃಖಗಳನ್ನು ಶರಣರೊಡನೆ ಹಂಚಿಕೊಳ್ಳಲು ಕಲ್ಯಾಣ ಕಿರಣ ಸಾಧನ.

ಬೌದ್ಧರು ಬುದ್ಧನಿಗೆ, ಅನೇಕ ರಾಜ್ಯ ಸರ್ಕಾರಗಳು ಶಿವನಿಗೆ ಸ್ಮಾರಕಗಳನ್ನು ಮಾಡಿದ್ದಾರೆ. ಗುರು ಬಸವಣ್ಣನವರಿಗೆ ಸ್ಮಾರಕ ಮಾಡುವುದು ನಮ್ಮ ಉದ್ದೇಶ. ಇದಕ್ಕೆ ಹಣ ಎಲ್ಲಿಂದ ಬರಬೇಕು? ಸರ್ಕಾರಿ ಮೂಲದಿಂದ ಸಹಾಯ ಪಡೆದುಕೊಳ್ಳುವುದು ನಮಗೆ ಇಷ್ಟವಿಲ್ಲದ್ದು. ಜನರು ಕರದ ಮೂಲಕ ತುಂಬುವ ಬೊಕ್ಕಸದ ಹಣವು ನಾಡಿನ ಅಭಿವೃದ್ಧಿ, ಬಡಜನರ ಏಳಿಗೆಗೆ ವಿನಿಯೋಗವಾಗಬೇಕೇ ವಿನಾ ಮಠಮಾನ್ಯಗಳಿಗಲ್ಲ. ಭಕ್ತರು ತಮ್ಮ ಮಠಗಳನ್ನು ಬೆಳೆಸಬೇಕು. ಬಸವ ಪುತ್ಥಳಿಯು ಭಕ್ತರ ನೆರವಿನಿಂದಲೇ ಆಗಬೇಕು. ಬೇರೆ ಪತ್ರಿಕೆಗಳಲ್ಲಿ ಜಾಹೀರಾತು ಕೊಡಲು ಅಷ್ಟು ಹಣ ಎಲ್ಲಿಂದ ತರಬೇಕು? ನಮ್ಮ ಶರಣರಿಗೆ ತಲ್ಪಬೇಕಾದರೆ ನಮ್ಮ ಪತ್ರಿಕೆಯಿಂದಲೇ ಕೊಡಬೇಕು ತಾನೆ? ಆಸೆ -ವೈಯಕ್ತಿಕ ಸುಖಕ್ಕೆ ಸೀಮಿತವಾದುದು. ಸಮಷ್ಟಿಯ ಹಿತಕ್ಕಾಗಿ ಮಾಡುವುದು ಸ್ವಾರ್ಥವಲ್ಲ. ಗೃಹಸ್ಥರು ತಮ್ಮ ಹೆಂಡತಿ -ಮಕ್ಕಳ ಸುಖ ನೋಡಿಕೊಂಡು ಸ್ವಲ್ಪ ದಾನ ಮಾಡುವರು. ನಾವು ಸನ್ಯಾಸಿಗಳು ಮಾಡುವುದೆಲ್ಲ ಸಮಾಜಕ್ಕಾಗಿ ಅಂದಾಗ ಅದು ಸ್ವಾರ್ಥವಲ್ಲ ಇಲ್ಲಿ ಆಸೆ ಇಲ್ಲ.

2.? ನವಲಿಂಗ ಸ್ಥಾವರ ಬಗ್ಗೆ ಕಲ್ಯಾಣ ಕಿರಣದಲ್ಲಿ ಕೊಟ್ಟದ್ದೀರಿ. ಧರ್ಮಗುರು ಬಸವಣ್ಣನವರು ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಹೇಳಿ ಸ್ಥಾವರ ಬೇಡವೆಂದಿದ್ದಾರೆ. ಅಂದಾಗ ನೀವು ಸ್ಥಾವರಕ್ಕೆ ಹೆಚ್ಚು ಮಹತ್ವ ಕೊಡುವಿರಲ್ಲ?

★ ಸ್ಥಾವರ -ಜಂಗಮ ಒಂದು ನಾಣ್ಯದ ಎರಡು ಮುಖಗಳು. ಪುಸ್ತಕ ಸ್ಥಾವರ - ಅದರೊಳಗಿನ ಜ್ಞಾನ ಜಂಗಮ; ಬಸವ ಮಂಟಪ ಸ್ಥಾವರ ಅದರೊಳಗೆ ನಡೆಯುವ ಪ್ರಾರ್ಥನೆ, ಅನುಭವ ಗೋಷ್ಠಿ ಜಂಗಮ. ದೇಹ ಸ್ಥಾವರ, ಆತ್ಮ ಜಂಗಮ. ಸ್ಥಾವರವು ಜಂಗಮಕ್ಕೆ ಸಾಧನ. ಕೂಡಲ ಸಂಗಮದಲ್ಲಿ ಶರಣರ ಮಂಟಪಗಳನ್ನು ಮಾಡಲಾಗಿದೆ. ಅವು ಸ್ಥಾವರ, ಅವು ಕೊಡುವ ಶರಣರ ಕಲ್ಪನೆ ಜಂಗಮ. ಸ್ಮಾರಕಗಳ ಅಗತ್ಯ ಬಹಳವಿದೆ. ನವಲಿಂಗ ಸ್ಥಾವರವು 9 ಶರಣರನ್ನು, 9 ಚಕ್ರಗಳ ಮಹತಿಯನ್ನು ಸಾರುವ ಉದ್ದೇಶ ಹೊಂದಿದೆ.

3? ನೀವು ಹಣಕ್ಕಾಗಿ ಬಸವಣ್ಣನವರ ಮುಖವಾಡ ಹಾಕಿದ್ದೀರೆಂದು ಕೆಲವರ ಟೀಕೆ.

★ ಹಣ ಬೇಕಾದವರು ಬಸವಣ್ಣನ ಮುಖವಾಡ ಹಾಕುವುದಿಲ್ಲ. ತೋರಿಕೆಗಾಗಿ ಬಸವ ತತ್ವ ಹೇಳಿದರೂ ಅವು ಕಹಿ ಗುಳಿಗೆಗಳು. ಹಣಕ್ಕಾಗಿ ಆಸೆ ಪಡುವವರು ಏಕದೇವೋಪಾಸನೆ, ಸಮಾನತೆ, ವೈಚಾರಿಕತೆಗಳನ್ನು ಬೋಧೆ ಮಾಡುವುದಿಲ್ಲ. ಜ್ಯೋತಿಷ್ಯ ಹೇಳುವುದು, ನಿಂಬೆಹಣ್ಣು ಮಂತ್ರಿಸುವುದು, ತಾಯತ ಕರಿದಾರ ಕಟ್ಟುವುದು ಮುಂತಾಗಿ ಮಾಡುತ್ತಾರೆ. ಬಸವ ತತ್ವವನ್ನು ತೋರಿಕೆಗಾಗಿ ಹೇಳಿದರೂ ಕೇಳಿ, ಸಂತೋಷಿಸಿ ಹಣ ಕೊಡುವವರು ವಿಚಾರಶೀಲರೇ ವಿನಾ ಕುರಿ ಬುದ್ಧಿಯವರಲ್ಲ. ಆದ್ದರಿಂದ ಬೇರೆ ಮುಖವಾಡ ಹಾಕುವುದಕ್ಕಿಂತಲೂ ಬಸವಣ್ಣನವರ ಮುಖವಾಡ ಹಾಕುವುದು ಶ್ರೇಯಸ್ಕರ.

4? ಮೆಟ್ಟಲಿನ ಮೇಲೆ ದಾನಿಗಳ ಹೆಸರು ಹಾಕಿದರೆ ತುಳಿದಂತಾಗುವುದಿಲ್ಲವೆ?

★ ನಾವು ಆಯ್ಕೆ ಮಾಡಿರುವ ಮೆಟ್ಟಲಿನ ಭಾಗ ನೇರವಾಗಿ ನಿಂತಿರುವುದು; ತುಳಿಯಲು ಬರದೆ ಇರುವುದು. ನಿಮಗೆ ಗೊತ್ತಿದೆಯೋ ಇಲ್ಲವೊ, ಹಿಂದಿನ ಕಾಲದಲ್ಲಿ ರಾಜರು ಬೃಹತ್ ದೇವಾಲಯ ಕಟ್ಟಿಸಿ, ಗರ್ಭಗುಡಿಯ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡುವ ತಮ್ಮ ಚಿತ್ರ ಕೊರೆಸುತ್ತಿದ್ದರು. ಅವರ ಉದ್ದೇಶ ಭಕ್ತರು ತಮ್ಮ ಪಾದಗಳನ್ನು ಅದರ ಮೇಲಿಡಲಿ ಎಂದು. ಗುರು ಬಸವಣ್ಣವರು ಹೇಳುತ್ತಾರೆ, "ಒಡೆಯರು ಜೊಗೈಸುವ ಚಮ್ಮಾವುಗೆಯನ್ನಾಗಿ ನನ್ನನ್ನು ಮಾಡು" ಎಂದು!!

5 ? ಹಣ ಕೊಟ್ಟ ದಾನಿಗಳ ಹೆಸರುಗಳನ್ನು, ಫೋಟೋವನ್ನು ವಿವಿಧ ಸ್ಥಳಗಳಲ್ಲಿ ಹಾಕುವುದಾಗಿ ಹೇಳುತ್ತೀರಲ್ಲ. ಇದು ತಪ್ಪಲ್ಲವೆ ?ಏಕೆಂದರೆ, ಮಾಡಿದೆ, ನೀಡಿದೆ ಎಂಬ ಭಾವ ದಾನಿಗಳಲ್ಲಿ ಬರಬಾರದಲ್ಲವೆ?

★ ನಿಷ್ಕಾಮ ದಾನಿಗಳು ಶ್ರೇಷ್ಠರಿರಬಹುದು. ಆದರೆ ಸತ್ಕಾಮ ದಾನಿಗಳ ಕೊಡುಗೆ ಏನೂ ಸಾಮಾನ್ಯವಲ್ಲ. ಅವರಿಂದಲೇ ಅನಾಥಾಶ್ರಮ, ವೃದ್ಧಾಶ್ರಮ ನಡೆಯುತ್ತವೆ. ಮಾನವೀಯ ಸೇವಾ ಕಾರ್ಯಗಳು, ಬಡವರ ಶಿಕ್ಷಣ-ವಿವಾಹ ಇತ್ಯಾದಿ ನಡೆಯುತ್ತದೆ. ಕೊಡದೆ ತ್ಯಾಗಿ ಎನಿಸಿಕೊಂಬುದು ಸರಿಯಲ್ಲ, ಕೊಟ್ಟು ತ್ಯಾಗಿ ಎನಿಸಿಕೊಂಬುದು ತಪ್ಪಲ್ಲ. ಅಂಥ ಜನರಿಂದ ಸ್ಫೂರ್ತಿ ಪಡೆದು ಮತ್ತಷ್ಟು ಜನ ದಾಸೋಹಕ್ಕೆ ಸಿದ್ಧರಾಗುತ್ತಾರೆ. ನೀಡಿದವರು ನಿರೀಕ್ಷೆ ಮಾಡದೆ ಇದ್ದರೂ ಪಡೆದುಕೊಂಡವರು ಸ್ಮರಿಸುವುದು ಅತ್ಯಗತ್ಯ.

ಲಿಂಗಾಯತ ಜನಗಣತಿ -ಜಾಗೃತಿ ಅಭಿಯಾನ

ಸವದತ್ತಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣೆ.ಡಾ|| ಅನ್ನಪೂರ್ಣ ಹಿರಲಿಂಗಣ್ಣನವರು ಲಿಂಗಾಯತ ಜನಗಣತಿ ಜಾಗೃತಿ ಅಭಿಯಾನದ ಅಂಗವಾಗಿ ತಾಲ್ಲೋಕಿನ ಅಸುಂಡಿ ಗ್ರಾಮದಲ್ಲಿ ದಿ. 8-3-2010 ರಂದು ಲಿಂಗಾಯತ ಜನಗಣತಿಯ ಪ್ರಚಾರ ಸಭೆ ನಡೆಸಿದರು. ಅಸುಂಡಿ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಬಸವ ಜ್ಯೋತಿ ಕಾರ್ಯಕ್ರಮದ ನಿಮಿತ್ತ ಸಭೆ ಸೇರಿದ ಜನರನ್ನು ಉದ್ದೇಶಿಸಿ ಮಾತನಾಡಿ, "ಮುಂಬರುವ 2011ರ ಜನಗಣತಿಯಲ್ಲಿ ವೀರಶೈವ, ಹಿಂದು -ಲಿಂಗಾಯತ, ವೀರಶೈವ -ಲಿಂಗಾಯತ ಎಂದೆಲ್ಲ ಬರೆಸದೆ ಧರ್ಮ ಕಾಲಂದಲ್ಲಿ ಕೇವಲ ಲಿಂಗಾಯತ ಎಂದು ಬರೆಸಬೇಕು. ರಾಜ್ಯ ಸರ್ಕಾರವು ಲಿಂಗಾಯತರ ಕೆಲವು ಉಪಜಾತಿಗಳಿಗೆ ವಿಶೇಷ ಸವಲತ್ತು ಕೊಟ್ಟಿರುವುದರಿಂದ ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಿದರೆ ಹೇಗೋ ಏನೋ ಎಂಬ ಆತಂಕ ಬೇಡ. ಕೇಂದ್ರ ಸರ್ಕಾರವು ಜನಗಣತಿ ಮಾಡುವ ಉದ್ದೇಶ ಈ ದೇಶದಲ್ಲಿ ಯಾವ ಯಾವ ಧರ್ಮದವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಮಾತ್ರ ತಿಳಿಯುವುದು ಎಂದು ಸ್ಪಷ್ಟಪಡಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಸಿದ್ಧರಾಮಯ್ಯನ ಮಠ, ಎಫ್.ಕೆ. ತೋಟಗಿ, ಮಲ್ಲಪ್ಪ ಹೊನ್ನಬಿಂದಗಿ, ಎಸ್.ಎನ್. ಗಾಣಿಗೇರ, ಎಸ್.ಐ.ಹಾಳಮನಿ, ಎಂ.ಬಿ. ನರಗುಂದ, ಡಿ.ಎ.ಕೋರಿ ಕೊಪ್ಪ ಮುಂತಾದವರು ಉಪಸ್ಥಿತರಿದ್ದರು.

375. ಶರಣರ ಅಗಲಿಕೆಗಿಂತ ಮರಣವೇ ಲೇಸು

ಕಂಡಡೆ ಮನೋಹರವಯ್ಯ ; ಕಾಣದಿದ್ದಡೆ ಅವಸ್ಥೆ ನೋಡಯ್ಯಾ!
ಹಗಲಿರುಳಹುದು ; ಇರುಳು ಹಗಲಹುದು !
ಎಂತಯ್ಯಾ ಆಳವಾಡಿ ಕಳೆವೆನು ?
ಒಂದು ಜುಗ ಮೇಲೆ ಕೆಡೆದಂತೆ !
ಲಿಂಗದೇವನ ಶರಣರನಗಲುವ ಧಾವತಿಯಿಂದ
ಮರಣವೆ ಲೇಸು ಕಂಡಯ್ಯಾ – ಬ.ವ.ದೀ 371

ಬಸವ ಮಹಾಮನೆಯಲ್ಲಿ ಶರಣರ ಓಡಾಟ ನಯನಾನಂದಕರ, ಒಡನಾಟ ಆಪ್ಯಾಯಮಾನ, ಅನುಭವ ಮಂಟಪದ ಚರ್ಚೆ ಕರ್ಣಾನಂದಕರ. ವಿಶಾಲವಾದ ತಿಳಿಗೊಳದಲ್ಲಿ ಶರಣರೆಂಬ ಹಂಸಪಕ್ಷಿಗಳು ಮನಸ್ವೇಚ್ಛೆಯಾಗಿ ವಿಹರಿಸುವ ಸಂಭ್ರಮ. ಅಂಥ ಮನೋಹರ ಪರಿಸರದಿಂದ ಹಂಸಪಕ್ಷಿಯೊಂದನ್ನು ಒಂದು ಮರುಭೂಮಿಗೆ ಎಸೆದಂತೆ ಇಂದಿನ ಪರಿಸ್ಥಿತಿ. ಹೀಗಾಗಿ ಶರಣರ ಸಾಂಗತ್ಯವಿಲ್ಲದೆ ಉಂಟಾಗಿರುವ ಮಾನಸಿಕ ಅವಸ್ಥೆ ಬಣ್ಣಿಸಲಸದಳ. ಇದರಿಂದಾಗಿ ಹಗಲು ಇರುಳಾದಂತೆ ಮನಸ್ಸಿಗೆ ಕತ್ತಲೆ ಕವಿಯುತ್ತಿದೆ. ಇರುಳು ನಿದ್ರೆ ಬಾರದೆ ಹಗಲಿನಂತಾಗಿ ಬಹು ದೀರ್ಘವೆನಿಸುತ್ತಿದೆ. ಹೇಗೆ ಪರಿತಪಿಸುತ್ತ ನಾನು ವೇಳೆಯನ್ನು ಕಳೆಯಲಿ? ಒಂದೊಂದು ದಿನವೂ ಒಂದು ಜುಗದಂತೆ (ಒಂದು ಯುಗವು ಹದಿನೆಂಟು ಸಾರಿ ತಿರುಗಿ ಬಂದರೆ ಅದು ಜುಗ ಎನ್ನಿಸಿಕೊಳ್ಳುತ್ತದೆ) ಭಾಸವಾಗುತ್ತಿದೆ. ಲಿಂಗದೇವನ ಶರಣರನ್ನು ಅಗಲುವ ಸಂಕಟಕ್ಕಿಂತ ಸಾಯುವುದೇ ಲೇಸೆನಿಸುತ್ತದೆ. ಶರಣರನ್ನು ಅನಿವಾರ್ಯವಾಗಿ ಅಗಲಿದ ಗುರುಬಸವಣ್ಣನವರು ನೀರಿನಿಂದ ಹೊರತೆಗೆದ ಮೀನಿನಂತೆ ಚಟಪಟಿಸುತ್ತಿದ್ದಾರೆ.

376. ಶರಣಪ್ರೇಮಿ ಗುರುಬಸವಣ್ಣನವರು

ಅಂಗೈ ತಿಂದುದೆನ್ನ, ಕಂಗಳು ಕೆತ್ತಿಹವಯ್ಯಾ;
ಬಂದಹರಯ್ಯಾ ಪುರಾತರೆನ್ನ ಮನೆಗೆ,
ಬಂದಹರಯ್ಯಾ ಶರಣರೆನ್ನ ಮನೆಗೆ !
ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದಡೆ
ಲಿಂಗಾರ್ಚನೆಯ ಮಾಡಿಸುವೆ, ಲಿಂಗದೇವಾ. – ಬ.ವ.ದೀ 372

ನಿಸರ್ಗವು ತುಂಡು ತುಂಡಾಗಿರದೆ ಅಖಂಡವಾಗಿದೆ. ಸುನಾಮಿಯಂತಹ ಪ್ರಾಕೃತಿಕ ವಿಕೋಪ ಸಂಭವಿಸುವ ಮುನ್ನ ನಾಯಿಗಳು ವಿಚಿತ್ರವಾಗಿ ಬೊಗಳುತ್ತವೆ, ಪ್ರಾಣಿಗಳು ಎತ್ತರದ ಸ್ಥಳಕ್ಕೆ ಓಡುತ್ತವೆ. ಅದೇ ರೀತಿ ಶರೀರದಲ್ಲೂ ಕೆಲವು ಸೂಚನೆಗಳು ಕಾಣಬಹುದೆ? ಅಂಗೈ ವಿಕೋ ಕೆರೆಯುತ್ತಿದೆ (ಅದರಲ್ಲಿ ನವೆಯಾಗುತ್ತಿದೆ) ಕಣ್ಣಿನ ರೆಪ್ಪೆಗಳು ಪಟಪಟನೆ ಬಡಿಯುತಿವೆ. ಯಾರೋ ಹೊಸಬರಾದ ಶರಣರು ಬರುವಂತೆ ಕಾಣುತ್ತಿದೆ. ಮನಸ್ಸು ಉಲ್ಲಾಸದಿಂದ ಹರ್ಷಿಸುತ್ತಿದೆ. ಗುರುಬಸವಣ್ಣನವರ ಕನಸಿನಲ್ಲಿ ಸದಾ ಜಂಗಮರು ಬರುವ, ಅನುಭವ ಗೋಷ್ಠಿ ಮಾಡುವ ಅನುಭವಗಳೇ ಕಾಣುತ್ತವೆ. ಇಂಥಾ ಕನಸು ದಿಟವಾಗುವಂತೆ ಜಂಗಮರು ಮನೆಗೆ ಬಂದರೆ ಅವರಿಗೆ ಲಿಂಗಾರ್ಚನೆ ಮಾಡಲು ಎಲ್ಲ ಅನುಕೂಲತೆ ಮಾಡಿಕೊಡುತ್ತೇವೆ. ಇಂಥ ಅವಕಾಶಕ್ಕಾಗಿ ಕಾಯುತ್ತೇನೆ ಎನ್ನುತ್ತಾರೆ ಗುರುಬಸವಣ್ಣನವರು.

377. ಲಿಂಗಪೂಜೆ – ಜಂಗಮ ದರ್ಶನ

ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು ಲಿಂಗವೆ.
ಪರಮಸುಖವ ಕೊಡು, ಕಂಡಾ, ಲಿಂಗವೆ ಲಿಂಗದೇವಾ,
ಇದೇ ವರವ ನಿಮ್ಮಲ್ಲಿ ಬೇಡುವೆ. – ಬ.ವ.ದೀ 373

ಯಾವುದೇ "ಇದು ಸಾಕೆನಿಸದ, ಮತ್ತೊಂದು ಬೇಕೆನಿಸದ ಪರಮ ಸುಖ?" ಗುರುಬಸವಣ್ಣನವರ ದೃಷ್ಟಿಯಲ್ಲಿ ಇಷ್ಟಲಿಂಗವನ್ನು ಪೂಜಿಸುತ್ತ ಆನಂದಿಸುವುದು; ಜ್ಞಾನಿಗಳು, ತ್ಯಾಗಿಗಳೂ ಆದ ಜಂಗಮರ ದರ್ಶನವನ್ನು ಪಡೆಯುವುದು. ದೇವರನ್ನು ಹುಡುಕಿಕೊಂಡು ಹೊರಗೆಲ್ಲೂ ಸುತ್ತ ಬೇಕಾಗಿಲ್ಲ. ತಾನಿದ್ದಲ್ಲಿಯೇ ಆನಂದ ಪಡುತ್ತ ಪೂಜಿಸಬಹುದು; ಪೂಜಾರಿಯ ಮಧ್ಯಸ್ಥಿಕೆ ಇಲ್ಲ, ಸಮಯದ ನಿರ್ಬಂಧವಿಲ್ಲ.

"ಜ್ಞಾನಿಗಳ ಮುಖದರ್ಶನದಿಂದ ಅನುಗ್ರಹ ಪ್ರಾಪ್ತವಾಗುವುದು ಮಾತ್ರವಲ್ಲ ಜ್ಞಾನ ಸಂಪತ್ತೂ ಲಭ್ಯವಾಗುವುದು. ಅದಕ್ಕಾಗಿ ಇದೊಂದು ವರವನ್ನು ಕೊಟ್ಟರೆ ಸಾಕು" ಎನ್ನುತ್ತಾರೆ, ಜಂಗಮ ಪ್ರೇಮಿ ಗುರುಬಸವಣ್ಣನವರು.

378. ಶರಣರೇ ಸರ್ವಸ್ವ

ಮನೆದೈವ, ಕುಲದೈವ ಎನಗೆ ನಿಮ್ಮವರಯ್ಯಾ!
ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನ,
ಲಿಂಗದೇವಾ, ನಿಮ್ಮ ಶರಣರಿಗೆ. – ಬ.ವ.ದೀ 374

ನೂರಾರು ದೈವಗಳನ್ನು ಪೂಜಿಸುವ ಮೂಢ ಭಕ್ತರು ಏನೆಲ್ಲವನ್ನು ಬಿಟ್ಟರೂ ಮನೆ ದೇವರು, ಕುಲದೇವರು ಎಂಬುವನ್ನು ಮಾತ್ರ ಬಿಡುವುದಿಲ್ಲ. ಬಿಟ್ಟರೆ ಏನಾಗುವುದೋ ಎಂಬ ಅಂಜಿಕೆ ಅವರಿಗೆ.

ಲಿಂಗಾಯತ ಧರ್ಮ ಸ್ವೀಕಾರಕ್ಕೆ ಮೊದಲು ಬುಡಕಟ್ಟುಗಳಾಗಿ (tribes), ಬಣಗಳಾಗಿ (clans) ವಿಂಗಡಣೆಯಾಗಿದ್ದ ಜನ ಗಣಧರ್ಮವಾದ ಲಿಂಗಾಯತವನ್ನು ಸೇರಿದ ಮೇಲೆ ಹಿಂದಿನ ಸಾಂಪ್ರದಾಯಿಕ ಆಚರಣೆಗಳನ್ನೂ ಕುಲಾಚಾರಗಳೆಂದು ರೂಢಿಸಿಕೊಂಡು ಬಂದರು. ಏಕದೇವೋಪಾಸಕರು, ಗಣ ಧರ್ಮದ ಅನುಯಾಯಿಗಳಾಗಬೇಕಾಗಿದ್ದ ಲಿಂಗಾಯತರು ಮನೆದೈವ, ಕುಲದೈವಗಳನ್ನು, ಬಣಾಚಾರ, ಕುಲಾಚಾರಗಳನ್ನು ತೊರೆಯಬೇಕು. ಅವರಿಗೆ ಸರ್ವಸ್ವವೂ ಸಹ ಧರ್ಮಿಗಳಾದ ಶರಣರು. ತನು, ಮನ, ಧನ ಶರಣರಿಗಾಗಿಯೇ ಮೀಸಲಾಗಬೇಕು. ಅವರ ನೋಟ, ಒಡನಾಟ ಎಲ್ಲವೂ ಶರಣರ ಜೊತೆಗೆ ಇರಬೇಕು. ಅಂದರೆ ಮತ್ತೆ ಅನ್ಯ ಪ್ರಭಾವಕ್ಕೆ ಒಳಗಾಗದಂತೆ ಇರಲು ಸಾಧ್ಯ.

379. ಶರಣರಿಗಾಗಿ ಕಾತುರ

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೇನೆಲೆಗವ್ವಾ,
ತರಗೆಲೆ ಗಿರುಕೆಂದಡೆ ಹೊರಗನಾಲಿಸುವೆ :
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ!
ಲಿಂಗದೇವನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದಡೆ ಸಂತೋಷಬಟ್ಟೆನೆಲೆಗವ್ವಾ ! – ಬ.ವ.ದೀ 375

ಒಬ್ಬ ಪ್ರೇಮಿ/ಪ್ರೇಯಸಿ ತನ್ನ ಪ್ರಿಯಕರ / ಪ್ರಿಯತಮೆಯ ಬರುವಿಗಾಗಿ ಹುಚ್ಚೆದ್ದು ಹಂಬಲಿಸುವಂತೆ ಜಂಗಮಪ್ರಾಣಿ ಬಸವಣ್ಣನವರು ಶರಣರ ಬರುವಿಗಾಗಿ ಹಂಬಲಿಸುತ್ತಾರೆ. ಸಾಧನೆಯ ಮೊದಲ ಹಂತದಲ್ಲಿ ಲಿಂಗದೇವನ ದಿವ್ಯ ಕೃಪೆ, ದರ್ಶನ, ಸಾಕ್ಷಾತ್ಕಾರಕ್ಕಾಗಿ ಗುರುಬಸವಣ್ಣನವರು ಹಂಬಲಿಸಿದರೆ ಅವನ್ನು ಪಡೆದುಕೊಂಡ ನಂತರ ಶರಣರ ಅನುಗ್ರಹ, ಸಾಂಗತ್ಯಕ್ಕೆ ಹಂಬಲಿಸುತ್ತಾರೆ. ಒಬ್ಬ ಗೃಹಣಿ ತಮ್ಮ ಗೃಹಸ್ಥ ಜೀವನದ ಪೂರ್ವಾರ್ಧದಲ್ಲಿ ಪತಿಯ ಮೇಲೆ ಗಮನವನ್ನು ಕೇಂದ್ರೀಕರಿಸಿದರೆ ಉತ್ತರಾರ್ಧದಲ್ಲಿ ಮಕ್ಕಳ ಅಭಿವೃದ್ಧಿಯ ಬಗ್ಗೆ ಆಲೋಚಿಸುವಂತಿದೆ ಈ ಪ್ರವೃತ್ತಿ. ಶರಣರು, ಜಂಗಮರು ಎಂದರೆ **ಜ್ಞಾನಿಗಳು ಮಾತ್ರವಲ್ಲ ಲಿಂಗಾಯತ ಧರ್ಮಕ್ಕೆ ಸೇರ್ಪಡೆಯಾಗುತ್ತಿದ್ದ ನೂತನ ಅನುಯಾಯಿಗಳು.** ಇವರ ಬರುವಿಗಾಗಿ ಗುರುಬಸವಣ್ಣನವರು ಹೇಗೆ ಕಾತರಿಸುತ್ತಾರೆ? ನೋಡುವಾ,

ಮನೆಯ ಮುಂದೆ ಗಿಳಿಯ ಪಂಜರವನ್ನು ಕಟ್ಟಿ, ಅದರೊಳಗೆ ಮಾತನಾಡುವ ಗಿಳಿಯೊಂದನ್ನು ಇಟ್ಟು, ತಲೆ ಬಾಗಿಲಲ್ಲಿ ದೊಡ್ಡದಾಗಿ ಉರಿಯುವ ದೀಪವನ್ನಿಡುತ್ತಾರೆ. ಶರಣರು ಯಾವಾಗ ಬೇಕಾದರೂ ಬರಬಹುದು. ಆಗ ಮನೆಯ ಬಾಗಿಲು ಹಾಕಿದ್ದರೆ ಅವರು ವಾಪಸ್ಸು ಹೋಗುವರು. ಮನುಷ್ಯರಾದರೆ ನಿದ್ದೆಯಿಂದ ಮೈಮರೆಯಬಹುದು. ಗಿಳಿಯಾದರೆ ಸದಾ ಎಚ್ಚರವಾಗಿದ್ದು ಬಂದವರನ್ನು ಶರಣು ಬನ್ನಿ ಎಂದು ಸ್ವಾಗತಿಸುವುದು. ಯಾರೋ ಬಂದರು ಎಂದು ಸೂಚನೆ ನೀಡುವುದು, ಮನೆಯ ಬಾಗಿಲು ಕಾಣಲೆಂದು ಅದರ ಮೇಲೆ ದೀಪವನ್ನು ಹಚ್ಚಿಟ್ಟು ದೀಪವು ಆರದಂತೆ ಎಣ್ಣೆಯನ್ನೆರೆಯುತ್ತ ನೋಡಿಕೊಳ್ಳುವರು. ಶರಣರು ಬರುವ ದಾರಿಯನ್ನು ಕಾಯುತ್ತ, ಬರದಿದ್ದರೆ ಮಾನಸಿಕವಾಗಿ ಬಳಲುವರು. ಎಲ್ಲಿಯಾದರೂ ತರಗೆಲೆಯು ಗಾಳಿಗೆ ಸದ್ದು ಮಾಡಿದರೆ ಯಾರೋ ಶರಣರು ಬಂದರೆಂದು ಮೈಮನಗಳು ಪುಳಕಗೊಳ್ಳುವವು. ತಕ್ಷಣ ಹೊರಗಿನ ಸದ್ದನ್ನು ಆಲಿಸುವರು.

ಯಾರೂ ಕಾಣದಿದ್ದರೆ, ಯಾರಾದರೂ ಶರಣರು ಬಂದು ಅವರನ್ನು ಗಮನಿಸದ ಕಾರಣ ಹೊರಟು ಹೋಗಿಬಿಟ್ಟರೋ ಎಂದು ಮನಸ್ಸು ಧಾವಂತ ಪಡುವುದು. ಯಾರಾದರೂ ಶರಣರು ಬಂದು ಬಾಗಿಲ ಮುಂದೆ ನಿಂತು 'ಶಿವಾ' ಎಂದು ಉಚ್ಚರಿಸಿದರೆ ಗುರುಬಸವಣ್ಣನವರಿಗೆ ಅಪಾರ ಆನಂದವಾಗುವುದು.

380. ಶರಣರ ಬರುವು ಪ್ರಾಣದ ಬರುವು

ಅಡವಿಯಲೊಬ್ಬ ಕಡು ನೀರಡಸಿ
ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ!
ಕುರುಡ ಕಣ್ಣ ಪಡೆದಂತೆ :
ಬಡವ ನಿಧಾನವ ಕಂಡಂತಾಯಿತ್ತಯ್ಯಾ!
ನಮ್ಮ ಲಿಂಗದೇವನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ – ಬ.ವ.ದೀ 376

ಅಡವಿಯಲ್ಲಿ ದಾರಿತಪ್ಪಿ ಅಲೆಯುತ್ತಿರುವ ವ್ಯಕ್ತಿಯೊಬ್ಬನಿಗೆ ವಿಪರೀತ ಬಾಯಾರಿಕೆಯಾಗಿ ಇನ್ನು ಪ್ರಾಣವೇ ಹೋಗುತ್ತದೆ ಎಂಬಂತೆ ಸಂಕಟ ಪಡುತ್ತಿರುವಾಗ, ಪಕ್ಕದಲ್ಲೇ ನೀರನ್ನು ನೋಡಿದರೆ ಅವನಿಗೆ ಎಷ್ಟು ಸಂತೋಷವಾಗಲಿಕ್ಕಿಲ್ಲ! ಹುಟ್ಟಿನಿಂದಲೂ ಕುರುಡನಾದವನಿಗೆ ಜಗತ್ತಿನ ದೃಶ್ಯಾನಂದವೇ ಸಿಕ್ಕದಂತಹ ವಿಲಕ್ಷಣ ಪರಿಸ್ಥಿತಿಯಲ್ಲಿ ಇದ್ದಕ್ಕಿದ್ದಂತೆಯೇ ಕುರುಡನಿಗೆ ಕಣ್ಣುಗಳು ಕಾಣುವಂತಾಗಿ ಬಿಟ್ಟರೆ ? ಒಬ್ಬ ದಟ್ಟ ದರಿದ್ರನಿಗೆ ಇದ್ದಕ್ಕಿದ್ದಂತೆಯೇ ನಿಧಾನವು ದೊರೆತರೆ? ಇವರೆಲ್ಲರಿಗೆ ಆಗುವ ಆನಂದ ಅಸದಳ. ಅದೇ ರೀತಿ ದೇವನಿಗೆ ಒಲಿದ ಸದ್ಭಕ್ತರು, ಶರಣರ ಆಗಮನ ಪ್ರಾಣವೇ ಬಂದಂತೆ ಗುರುಬಸವಣ್ಣನವರಿಗೆ ಆನಂದದಾಯಕ.

381. ಶರಣರಿಗೆ ಸ್ವಾಗತ

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು
ಗುಡಿತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ 'ಉಘೆ ಚಾಂಗು ಭಲಾ' ಎಂಬೆ
ಲಿಂಗದೇವನ ಶರಣರು
ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ, – ಬ.ವ.ದೀ 377

ಗುರುಬಸವಣ್ಣನವರಿಗೆ ಶರಣರ ಬರುವು ಬಹುದೊಡ್ಡ ಹಬ್ಬ. ಇದು ಒಂದು ದಿನದ ಹಬ್ಬವಲ್ಲ, ನಿತ್ಯದ ಉತ್ಸವ. ಯಾವ ಕ್ಷಣದಲ್ಲಿ ಶರಣರು ಬರುವರೋ ತಿಳಿಯದು. ಅದಕ್ಕಾಗಿ ಸದಾ ಸಿದ್ಧತೆಯಲ್ಲಿರುವುದೇ ಸರಿ ಎಂದುಕೊಂಡು ತಲೆ ಬಾಗಿಲಿಗೆ ಹಸಿರು ತೋರಣವನ್ನು ಕಟ್ಟುತ್ತಾರೆ. ಮನೆಯ ಮುಂಭಾಗದಲ್ಲಿ ಒಂದು ಚಪ್ಪರ ಹಾಕಿ, ಅದರ ಕಂಬಕ್ಕೆ ಷಟಸ್ಥಲ ಧ್ವಜ (ಗುಡಿ)ವನ್ನು ಹಾರಿಸುತ್ತಾರೆ. ಮನೆಯನ್ನು ನಿತ್ಯವೂ ಸಾರಿಸಿ, ಗುಡಿಸಿ ಚಂದಾಗಿ ಇಡುವುದೇ ಅಲ್ಲದೆ ಗೋವಿನ ಹಾಲು, ತುಪ್ಪ, ಮೊಸರು ಮುಂತಾದವನ್ನು ಶರಣರ ಉಪಚಾರಕ್ಕೆ ಸಿದ್ಧಪಡಿಸಿಕೊಳ್ಳುತ್ತಾರೆ. ಮನೆಯ ಮುಂದೆ ಸುಂದರವಾಗಿ ರಂಗೋಲಿಯನ್ನು ಬಿಡಿಸಿರಲಾಗುತ್ತದೆ. ಶರಣರು ಬಂದಾಗ "ಉಘೆ ಚಾಂಗು, ಭಲಾ" ಎಂದು ಜಯಘೋಷ ಮಾಡಿ ಸ್ವಾಗತಿಸಿ ಕರೆದೊಯ್ಯುತ್ತಾರೆ. ಇಷ್ಟೆಲ್ಲ ಗೌರವ, ಉಪಚಾರ ಶರಣರಿಗೆ ಮಾಡುವುದೇಕೆಂದರೆ ಅವರು ಜ್ಞಾನ ಪ್ರಸಾದವನ್ನು, ಅನುಗ್ರಹವನ್ನು ನೀಡುವರು ಎಂಬ ಕಾರಣಕ್ಕೆ.

382. ಶರಣರ ಬರುವು ಹರುಷದ ಧಾರೆ

ಶಶಿಯ ಕಂಡು ಸಾಗರವೇರಿದಂತಾಯಿತ್ತಯ್ಯಾ
ಆನಂದದಿಂದ ನಲಿನಲಿದಾಡುವೆ,
ಆನಂದದಿಂದ ಕುಣಿಕುಣಿದಾಡುವೆ,
ಲಿಂಗದೇವನ ಶರಣರು ಬಂದಡೆ
ಉಬ್ಬಿ ಕೊಬ್ಬಿ, ಹರುಷದಲೋಲಾಡುವೆ ! – ಬ.ವ.ದೀ 378

ಒಂದನೆಯ ವಾಕ್ಯ, "ಸಾಸುವೆಯ ಮೇಲೆ ಸಾಗರವರಿದಂತಾಯಿತ್ತಯ್ಯ" ಎಂದು ರೂಢಿಯಲ್ಲಿದೆ. ಪಾಠಾಂತರಗಳು ಕೆಲವಿವೆ. 'ಸಸಿಯ ಮೇಲೆ ಸಾಗರವರಿದಂತಾಯಿತಯ್ಯ' ಎಂಬುದು ಮತ್ತೊಂದು.ಇವುಗಳನ್ನು ವಿಶ್ಲೇಷಿಸೋಣ. ಸಾಸುವೆಯ ಮೇಲೆ ಸಾಗರ ಹರಿದರೆ ಅದು ಕೊಚ್ಚಿಕೊಂಡು ಹೋಗುವಂತೆ ಶರಣರ ಬರುವಿನ ಆನಂದದ ಮಹಾಪೂರದಲ್ಲಿ ನಾನು 'ಕೊಚ್ಚಿಕೊಂಡು' ಹೋಗುತ್ತೇನೆ ಎಂದು ಅರ್ಥ ಮಾಡಬಹುದು. ಪಾಠಾಂತರಗಳು ಕೆಲವಿವೆ. 'ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯ' ಎಂಬುದು ಮತ್ತೊಂದು. ಇದನ್ನು ವಿಶೇಷಿಸೋಣ. ಸಾಸುವೆಯ ಮೇಲೆ ಸಾಗರ ಹರಿದರೆ ಅದು ಕೊಚ್ಚಿ ಕೊಂಡು ಹೋಗುವಂತೆ ಶರಣರ ಬರುವಿನ ಆನಂದದ ಮಹಾಪೂರದಲ್ಲಿ ನಾನು 'ಕೊಚ್ಚಿಕೊಂಡು' ಹೋಗುತ್ತೇನೆ ಎಂದು ಅರ್ಥ ಮಾಡಬಹುದು.

ಸಸಿಯ ಮೇಲೆ ಸಾಗರ ಹರಿದಾಗ ಅದೂ ಕೊಚ್ಚಿ ಹೋಗುವುದು ಎಂದು ಒಂದು ಅರ್ಥ ಮಾಡಿದರೆ, ಸಸಿಯ ಮೇಲೆ ಸಾಗರದ ನೀರು ಹರಿದಾಗ ಶರಣರ ಸಾಂಗತ್ಯವಿಲ್ಲದೆ ಮುದುಡಿದ್ದ ನನ್ನ ಮನಸು ಈಗ ಆನಂದದ ಧಾರೆಯಿಂದ ಚೇತರಿಸಿಕೊಂಡಿದೆ ಎಂದೂ ಅರ್ಥ ಮಾಡಬಹುದು. ಆದರೆ ಇವೆರಡು ಋಣಾತ್ಮಕ (Negative) ಆಗುತ್ತವೆ. ಸಾಸುವೆಯ ಮೇಲೆ ಸಾಗರ ಹರಿಯುವುದೂ, ಸಸಿಯ ಮೇಲೆ ಸಾಗರ ಹರಿಯುವುದು ಎರಡೂ ವಿಧಾಯಕವಲ್ಲ.

ಶಶಿಯ ಕಂಡು ಸಾಗರವೇರಿದಂತಾಯಿತ್ತಯ್ಯ ಎಂಬ ಪಾಠಾಂತರ ಅತ್ಯಂತ ಸೂಕ್ತ ಎನಿಸುತ್ತದೆ.

"ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ" ಎಂಬ ಧರ್ಮಪಿತರ ಇನ್ನೊಂದು ವಚನ ವಾಕ್ಯದ ಬೆಂಬಲವನ್ನೂ ಪಡೆಯುತ್ತದೆ. ಚಂದ್ರನ ದರ್ಶನದಿಂದ ಸಮುದ್ರವು ಹರುಷದಿಂದ ಉಬ್ಬುವಂತೆ ನನ್ನ ಮನಸ್ಸು ಉಬ್ಬಿ ಕೊಬ್ಬಿ ಹರುಷದಲ್ಲಿ ಓಲಾಡುತ್ತದೆ, ಶರಣರ ದರ್ಶನದಿಂದ ಎಂಬ ವಾಕ್ಯಕ್ಕೆ ಹೆಚ್ಚಿನ ಅರ್ಥ ಬರುತ್ತದೆ. ಹೀಗಾಗಿ ಶರಣರು (ಅನುಯಾಯಿಗಳು)ಬಂದಾಗ ಆನಂದದಿಂದ ನಲಿದಾಡುತ್ತಾರೆ, ಸಂಭ್ರಮದಿಂದ ಓಡಾಡುತ್ತಾರೆ, ಶರಣರೊಡನೆ ಹಾಡುತ್ತ ಕುಣಿದಾಡುತ್ತಾರೆ.

383. ಶರಣರ ಸಮ್ಮಿಲನದ ಪ್ರಭಾವ

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರು ಜಲಂಗಳು ಸುರಿಯದಿದ್ದಡೆ
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ,
ಲಿಂಗದೇವರ ಭಕ್ತಗಿದು ಚಿಹ್ನವೆ?
ಎನ್ನಲ್ಲಿ ಇಲ್ಲಾಗಿ, ಆನು ಡಂಬಕ ಕಾಣಿರೆ - ಬ.ವ.ದೀ.೩೭೯

ಧರ್ಮಬಂಧುಗಳು ಒಬ್ಬರನ್ನೊಬ್ಬರು ಭೇಟಿಯಾದಾಗ ಅಪಾರ ಹರ್ಷವನ್ನು ಅನುಭವಿಸಬೇಕು. ಯಾರಾದರೂ ನವದೀಕ್ಷಿತರು ದೀಕ್ಷೆ ಹೊಂದಿ ಸಮಾಜವನ್ನು ಪ್ರವೇಶಿಸಿದರೆ ಹರ್ಷದಿಂದ ಸ್ವಾಗತಿಸಬೇಕು. ನಮ್ಮ ಧರ್ಮಬಂಧುಗಳ ಸಂಖ್ಯೆ ಹೆಚ್ಚಾಯಿತ್ತಲ್ಲ ಎಂದು ಪುಳಕಗೊಳ್ಳಬೇಕು. ಶರಣರು ಬಹಳ ದಿನಗಳ ನಂತರ ಭೇಟಿಯಾದಾಗ ಉಭಯತರ ಮನಸ್ಸು ಒಂದಾಗಬೇಕು. ಶರೀರವು ಕರಗಿ ಹೋದಂತೆ ಭಾಸವಾಗಬೇಕು. ಪರಸ್ಪರ ಆಲಂಗಿಸಿಕೊಂಡಾಗ ಅಥವಾ ಪರಸ್ಪರ ಕೈಮುಟ್ಟಿ ಶರಣು ಶರಣಾರ್ಥಿ ಹೇಳುವಾಗ ಮೈಮನಗಳು ಪುಳಕಗೊಳ್ಳಬೇಕು. ಕಣ್ಣುಗಳಲ್ಲಿ ಆನಂದ ಬಾಷ್ಪ ಹರಿಯಬೇಕು; ಕಂಠವು ಗದ್ಗದಿತವಾಗಬೇಕು. ಇವೆಲ್ಲ ಅನುಭವಗಳು ಆಗದೆ ಯಾಂತ್ರಿಕವಾದ ದೃಷ್ಟಿಯನ್ನು ಬೀರಿದರೆ ಇದು ಲಿಂಗದೇವರ ಭಕ್ತರ ಚಿಹ್ನವಲ್ಲ, ಈ ಆನಂದಾನುಭೂತಿ ಇಲ್ಲದ ಯಾಂತ್ರಿಕ ಸಂಬಂಧ ಇರುವವರು ಡಾಂಭಿಕರೇ ಸರಿ.

(ನಮಗೆ ನಿಜ ಶರಣರ ಒಡನಾಟದಲ್ಲಿ ಇಂಥ ಅನುಭವ ಆಗಿವೆ. ನಮ್ಮನ್ನು ಗೌರವಿಸುವುದಷ್ಟೇ ಅಲ್ಲ ಅವರು ಇಟ್ಟಿರುವ ಪ್ರೀತಿಯನ್ನು ನೋಡಿದರೆ ಹೃದಯ ತುಂಬಿ ಬರುತ್ತದೆ. ನಾವು ಬಂದರೆ ಅವರ ಸಂಭ್ರಮವೇನು, ಓಡಾಟವೇನು, ಉಪಚಾರವೇನು. ಅಷ್ಟೊಂದು ಭಾವುಕರಾಗುತ್ತಾರೆ. ಅವರ ಸಂತೋಷವನ್ನು ನೋಡುವುದೇ ನಮಗೆ ಖುಷಿ ಕೊಡುತ್ತದೆ.

ಭದ್ರಾವತಿ ಮತ್ತು ಧಾರವಾಡ ರಾಷ್ಟ್ರೀಯ ಬಸವ ದಳದ ಶರಣ ಶರಣೆಯರ ಸಂತೋಷ ಕಂಡು ನಾವು ಪುಳಕಿತರಾಗುತ್ತೇವೆ. ನಿಮ್ಮದು ಅತಿ ಭಕ್ತಿಯಾಯಿತು ಎಂದು ಗದರುವುದೂ ಉಂಟು. ನಮ್ಮ ಹುಸಿಮುನಿಸನ್ನು ಅವರು ಸಂತೋಷದಿಂದಲೇ ಸ್ವೀಕರಿಸುತ್ತಾರೆ. ಇವರುಗಳ ಸಂಭ್ರಮ ನೋಡಿದಾಗೆಲ್ಲ ಧರ್ಮಪಿತರ ಮೇಲಿನ ವಚನವು ನೆನಪಾಗುತ್ತದೆ. ಶರಣ ಮೇಳದಲ್ಲಿ ಪರಿಚಿತರಾದ ವಿವಿಧ ರಾಜ್ಯಗಳ, ಬೇರೆ ಬೇರೆ ಊರುಗಳ ಶರಣ ಬಂಧುಗಳು ಪರಸ್ಪರ ಭೇಟಿಯಾಗಿ ಆನಂದಿಸುವುದು, ಪುನಃ ಮುಂದಿನ ಶರಣ ಮೇಳ ಯಾವಾಗ ಬಂದಿತೋ, ಶರಣ ಬಂಧುಗಳ ಒಡನಾಟ ಯಾವಾಗ ಸಿಕ್ಕೀತೋ ಎಂದು ಹಂಬಲಿಸುವುದು ಧರ್ಮಪಿತರ ವಚನಕ್ಕೆ ವ್ಯಾಖ್ಯಾನ ದಂತಿರುತ್ತದೆ. ಒಮ್ಮೆ ಬೆಂಗಳೂರಿನ ರಾಷ್ಟ್ರೀಯ ಬಸವ ದಳದವರು ಭದ್ರಾವತಿ ಬಸವ ಮಂಟಪಕ್ಕೆ ಹೋದಾಗ ಅಲ್ಲಿಯ ಶರಣ ಬಂಧುಗಳು ಇವರನ್ನು ಸ್ವಾಗತಿಸಿದ ರೀತಿ, ಆದರಿಸಿದ ಬಗೆ, ಉಪಚರಿಸಿದ ಆತ್ಮೀಯತೆಯನ್ನು ಬಂದು ಇವರು ಹೊಗಳಿದ್ದೇ ಹೊಗಳಿದ್ದು. ಈ ಉಪಚಾರ, ಆದರೊಡನೆ ಜ್ಞಾನ ಗೋಷ್ಠಿಯಲ್ಲಿ, ವಚನ ಚಿಂತನೆಯಲ್ಲಿ ತುಂಬಾ ಆಸಕ್ತಿ. ನಿಜ ಶರಣರ ಸಂಬಂಧ ಹೀಗಿರಬೇಕೆಂದು ಧರ್ಮಪಿತರು ಮೇಲಿನ ವಚನದಲ್ಲಿ ಹೇಳಿದ್ದಾರೆ.

384. ಯಾಂತ್ರಿಕ ಉಪಚಾರ

ಅಷ್ಟವಿಧಾರ್ಚನೆ ಷೋಡಷೋಪಚಾರಂಗಳು

ಅರಸರಿಯದ ಬಿಟ್ಟಿಯ ಮಾಡುವೆನು.
ಎನ್ನತಾಗಿದ ಸುಖವ ಜಂಗಮಕ್ಕರ್ಪಿಸಲರಿಯದ ಉಪಚಾರಿಯಾನು;
ಸ್ಥಾವರ ಜಂಗಮವನರಿಯದ ಪೂಜಕ ನಾನು;
ಮತ್ತೆ ನಾಚದೆ, ಲಿಂಗದೇವಯ್ಯಾ,
ಜಂಗಮವೆನ್ನ ಪ್ರಾಣಲಿಂಗವೆಂಬೆನು - ಬ.ವ.ದೀ.380

ಜಲವನ್ನು ಎರೆದು, ಗಂಧವನ್ನು ಹಚ್ಚಿ, ಅಕ್ಷತೆಯನ್ನಿಟ್ಟು, ಪತ್ರೆ-ಪುಷ್ಪಗಳನ್ನೇರಿಸಿ, ಧೂಪವನ್ನು ಸಲ್ಲಿಸಿ, ದೀಪ (ಆರತಿ)ವನ್ನು ಬೆಳಗಿ, ನೈವೇದ್ಯವನ್ನು ಸಮರ್ಪಿಸುವುದು ಅಷ್ಟವಿಧಾರ್ಚನೆ. ಲಿಂಗಾಯತ ಧರ್ಮದಲ್ಲಿ ಇವು ಲಿಂಗಕ್ಕೆ ಸಲ್ಲುವಂತಹವು. ಅರ್ಘ್ಯ, ಪಾದ್ಯ, ಆಚಮನ, ಪತ್ರೆ-ಪುಷ್ಪ ಗಂಧ, ಅಕ್ಷತೆ, ರುದ್ರಾಕ್ಷಿ ಮಾಲಾ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ -ಇವು ಷೋಡಶೋಪಚಾರಗಳು.

ಅಷ್ಟವಿಧಾರ್ಚನೆಯನ್ನು ಲಿಂಗಕ್ಕೆ, ಷೋಡಶೋಪಚಾರಗಳನ್ನು ಜಂಗಮಕ್ಕೆ ಯಾಂತ್ರಿಕವಾಗಿ ಅರಸರಿಯದ ಬಿಟ್ಟಿ ಕೆಲಸದಂತೆ ನಾನು ಮಾಡುತ್ತೇನೆ. ಕೆಲವೊಮ್ಮೆ ರಾಜಾಜ್ಞೆ ಹೊರಡಿಸಿ ಎಲ್ಲರೂ ಈ ಕೆಲಸವನ್ನು ಬಿಟ್ಟಿಯಾಗಿ (ಶುಲ್ಕವಿಲ್ಲದೆ) ಮಾಡಬೇಕು ಎಂದು ಹೇಳಲಾಗಿರುತ್ತದೆ. ಇದಕ್ಕೆ ಏನೂ ಪ್ರತಿಫಲ ಸಿಗದು, ಮೇಲಾಗಿ ಕೆಲಸ ಮಾಡಿದ್ದು ರಾಜನ ಗಮನಕ್ಕೂ ಬರದು. ಕೀರ್ತಿಯನ್ನು ತೆಗೆದುಕೊಳ್ಳುವವರು ಮೇಲಿನವರು ಎಂದು ಜನರು ನಿರುತ್ಸಾಹಿತರಾಗಿ ದುಡಿಯುತ್ತಾರೆ. ಆ ರೀತಿ ನಾನು ಕೂಡ ಯಾಂತ್ರಿಕವಾಗಿ ಲಿಂಗಪೂಜೆ ಮತ್ತು ಜಂಗಮ ಸೇವೆ ಮಾಡುತ್ತಿದ್ದೇನೆ. ನಾವು ಪಡೆಯುವ ಆದಾಯ, ಸಂತೋಷ ಎಲ್ಲವನ್ನೂ ಜಂಗಮಕ್ಕೆ(ಸಮಾಜಕ್ಕೆ) ಅರ್ಪಿಸಬೇಕು. ಇದನ್ನರಿಯದೆ ಏನನ್ನೋ ಮುಚ್ಚಿಟ್ಟುಕೊಳ್ಳಬೇಕೆಂಬ ಸ್ವಾರ್ಥಿ ನಾನು. ಇಷ್ಟಲಿಂಗವನ್ನು ಪೂಜಿಸುತ್ತೇನೆ. ನಿರಾಕಾರ ದೇವನ ಸಾಕಾರ ಮುಖವು ಸಮಾಜ ಎಂದು ಸೇವೆ ಮಾಡಲರಿಯದ ಡಾಂಭಿಕ ಪೂಜಕ. ತೋರಿಕೆಗಾಗಿ, ಜನ ಮೆಚ್ಚುಗೆಗಾಗಿ "ಜಂಗಮ ಎನ್ನ ಪ್ರಾಣ" ಎನ್ನುತ್ತೇನೆ ಅಷ್ಟೆ.

ಕೆಲವರು ಬಾಯಿ ಮಾತಿನಲ್ಲಿ ಎಣೆಯಿಲ್ಲದ ಆದರ್ಶ ತೋರ್ಪಡಿಸುತ್ತಾರೆ. ಆದರೆ ಕೃತಿಯಲ್ಲಿ ಏನೇನೂ ಮಾಡುವುದಿಲ್ಲ. ಜಂಗಮವೇ ನನ್ನ ದೈವ, ಪ್ರಾಣ ಎಂದು ಮಾತನಾಡುತ್ತಾರೆ, ಕೈಬಿಚ್ಚಿ ಏನನ್ನೂ ಕೊಡುವುದಿಲ್ಲ. ಅಂಥವರಿಗಾಗಿ ಈ ವಚನವು ಹೇಳಲ್ಪಟ್ಟಿದೆ.

385. ಹೊರಗಷ್ಟೆ ನುಣ್ಪು

ಆವಗೆಯಲೊದಗಿದ ಭಾಂಡದಂತೆ
ಅಮೃತದೊಳಗಿರ್ದ ಸರ್ಪನ ತನುವಿನಂತೆ
ಇರ್ದೆನಯ್ಯಾ ಹೊರಗೆ ನುಂಪಾಗಿ!
ಸಿಂಹಕ್ಕೊಲಿದ ಮದಕರಿಯಂತೆ
ಆನು ಜಂಗಮಕ್ಕೊಲಿದೆನಯ್ಯಾ, ಲಿಂಗದೇವಾ. - ಬ.ವ.ದೀ.381

ಕುಂಬಾರನ ಆವುಗೆಯಲ್ಲಿ ತಯಾರಾಗುವ ಭಾಂಡ (ಮಡಿಕೆ) ಹೊರಗೆ ಎಷ್ಟು ನುಣುಪಾಗಿ ಇರುವುದೋ ಹಾಗೆ ಒಳಭಾಗದಲ್ಲಿ ಇರುವುದಿಲ್ಲ. ಅಮೃತದೊಳಗೆ ಒಂದು ಸರ್ಪವನ್ನು ಎದ್ದಿ ತೆಗೆದಾಗ ಮೈಗೆ ಅಮೃತ ಅಂಟಿದರೂ ಅದರೊಳಗಣ ವಿಷದ ಗುಣ ಹೋಗಿರುವುದಿಲ್ಲ. ಅದೇ ರೀತಿ ಬಹಳಷ್ಟು ಜನ ಧಾರ್ಮಿಕರು, ಹೊರಗಡೆಯ ವೇಷ ಭೂಷಣ ಬಲು ಧಾರ್ಮಿಕ; ಢಾಳಾಗಿ ವಿಭೂತಿ ಹಚ್ಚಿ, ಬಂಗಾರದ ಚಿಪ್ಪಿನಲ್ಲಿ ರುದ್ರಾಕ್ಷಿಯನ್ನು ಹೆಣೆದುಕೊಂಡು ಶುಭ್ರ ಬಿಳಿಯ ಬಟ್ಟೆ ಧರಿಸಿ ದೇವಭಕ್ತರಂತೆ ತೋರುವರು. ಅಂತರಂಗದಲ್ಲಿ ಮಾತ್ರ ವಿಷ ತುಂಬಿಕೊಂಡಿರುವರು, ಹಾವಿನ ಚರ್ಮ ಹೊರಗೆ ಅತ್ಯಂತ ಮೃದುವಾಗಿ, ಸುಂದರವಾಗಿ ಇದ್ದು ಒಳಗೆ ವಿಷ ಇರುವ ರೀತಿಯಲ್ಲಿ. ಮದಕರಿಯು ಎಷ್ಟೇ ಶಕ್ತಿಶಾಲಿಯಾದ ಪ್ರಾಣಿಯಾದರೂ ಸಿಂಹವನ್ನು ನೋಡುತ್ತಲೇ ಅಂಜಿ ಶರಣಾಗುವುದು. ಅದೇ ರೀತಿ ವ್ಯಕ್ತಿಯು ಸಮಾಜ (ಜಂಗಮ)ಕ್ಕೆ ಅಂಜಿ ತಲೆ ಬಾಗಲೇ ಬೇಕು.

ವ್ಯಕ್ತಿಗಿಂತಲೂ ಸಮಾಜ, ವ್ಯಷ್ಟಿಗಿಂತಲೂ ಸಮಷ್ಟಿ ಹಿರಿದು ಇದಕ್ಕೆ ವ್ಯಕ್ತಿ ತಲೆ ಬಾಗಲೇಬೇಕು

ಎಂಬುದು ಗುರು ಬಸವಣ್ಣನವರ ಆಶಯ. ಹಿಂದಿನ ಕಾಲದಲ್ಲಿ ತಂಟೆ -ತಕರಾರು, ಜಗಳ ಬಂದಾಗ ಸಮಾಜದವರು ಬಸವಣ್ಣನ ಗುಡಿಯಲ್ಲಿ ಸೇರಿ, ನ್ಯಾಯ ಪಂಚಾಯತಿ ಮಾಡುತ್ತಿದ್ದರು. ವ್ಯಕ್ತಿಯು ಸಮಾಜದ ನಿರ್ಣಯಕ್ಕೆ ತಲೆ ಬಾಗುತ್ತಿದ್ದ. ಹೀಗಾಗಿ ನ್ಯಾಯಲಯದ ಕಟ್ಟೆಯನ್ನು ಏರುತ್ತಿರಲಿಲ್ಲ. ಈ ವ್ಯವಸ್ಥೆಯಲ್ಲಿ ನ್ಯಾಯದಾತರು ಪ್ರಾಮಾಣಿಕರು, ನಿರ್ಮೋಹಿಗಳೂ ಆಗಿದ್ದರೇನೋ ಸರಿ, ವ್ಯಕ್ತಿ ಪಕ್ಷಪಾತಿಗಳಾಗಿದ್ದರೆ ಹಣ, ಅಧಿಕಾರಕ್ಕೆ ಮಣಿಯುತ್ತಿದ್ದರೆ ಅಂಥವರಿಂದ ನ್ಯಾಯವನ್ನು ನಿರೀಕ್ಷಿಸಬಹುದೆ? ಗುರು ಬಸವಣ್ಣನವರ ಆಶಯವೇನೆಂದರೆ, "ವ್ಯಕ್ತಿ ಕೇವಲ ತನ್ನ ಹಿತಕ್ಕಾಗಿ ಬದುಕಬಾರದು, ಪ್ರತಿಯೊಬ್ಬರೂ ಸಮಷ್ಟಿಯ ಹಿತಚಿಂತನೆ ಮಾಡಬೇಕು. ತನ್ನ ಗಳಿಕೆಯ ಒಂದು ಪಾಲನ್ನು ಸಮಷ್ಟಿಯ ಹಿತಕ್ಕೆ ಮೀಸಲಿಡಬೇಕು." ಎಂಬುದು.

386.ನಡೆ -ನುಡಿಯಲ್ಲಿ ಅಂತರ

ಸ್ಥಾವರ ಜಂಗಮ ಒಂದು ಎಂದು ಇದಿರ ನುಡಿವೆ
ನಾನೆಡವುತಿಪ್ಪೆ, ಸಹಜನಲ್ಲಯ್ಯಾ!
ಆನು ಸಮ್ಯಕ್ಕನಲ್ಲಯ್ಯಾ!
ಆನುಭಯಲಿಂಗಸಂಗಿ ಎಂಬೆನು.
ಈ ನುಡಿ ಸುಡದಿಹುದೆ ಲಿಂಗದೇವಾ?
- ಬ.ವ.ದೀ.382

ಸ್ಥಾವರ ಎಂದರೆ ಇಲ್ಲಿ ಜಡವಾದ ಜಗತ್ತು ಎಂದು ಅರ್ಥ ಮಾಡಬಾರದು. ಸ್ಥಾವರ ಎಂದರೆ ತಿನ್ನಲು ಬಾಯಿಲ್ಲದ ನಿರಾಕಾರ ದೇವರು; ಜಂಗಮ ಎಂದರೆ ಚೈತನ್ಯ ಸ್ವರೂಪಿ ಮಾನವರು ಮತ್ತು ಜೀವರಾಶಿ. ದೇವರು ನಿರಾಕಾರ, ಅವನು ಉಣ್ಣುವುದಿಲ್ಲ, ಉಡುವುದಿಲ್ಲ, ಆದ್ದರಿಂದ ದೇವರಿಗೆ ಸಲ್ಲಿಸಬೇಕು ಎನ್ನುವವನು ದೇವನ ಸಾಕಾರ ಮುಖವಾದ ಜಂಗಮಕ್ಕೆ ಸಲ್ಲಿಸಬೇಕು. ಮಾತಿನಲ್ಲಿ ದೇವನ ಮುಖವೇ ಸಮಾಜ ಎಂದು ನಾನು ನುಡಿಯುತ್ತೇನೆ. ಆದರೆ ಆಚರಣೆಯಲ್ಲಿ ಮಾತ್ರ ತಪ್ಪುತ್ತೇನೆ. ನನ್ನಲ್ಲಿ ಸಹಜತೆ ಇಲ್ಲ, ಇರುವುದೆಲ್ಲ ತೀರಾ ಕೃತಕತೆ. ನಿಜವಾದ ಭಕ್ತನು ಉಭಯ ಲಿಂಗ ಸಂಗಿಯಾಗಬೇಕು. ಅಂದರೆ ದೇವರನ್ನು ಎಷ್ಟು ಪ್ರೀತಿಸುವನೋ ಅಷ್ಟೇ ಸಮಾಜವನ್ನೂ ಆದರಿಸಬೇಕು; ಅದರ ಹಿತಚಿಂತನೆಯನ್ನು ಮಾಡಬೇಕು. ಹಾಗಲ್ಲದೆ ಬರೀ ಬಾಯಿ ಮಾತಿನಲ್ಲಿ ಸಮಾನತೆ ನುಡಿದರೆ ಅವನ ಬಡಬಡಿಕೆಯೇ ಸುಡುವ ಬೆಂಕಿಯಾಗಬಹುದು.

387.ನಿಮಿಷದ ಉದಾಸೀನ ಕೆಡಿಸಿತು

ಮಸಿಯನೇಸು ಕಾಲ ಬೆಳಗಿದಡೆ ಬಿಳಿದಾಗಬಲ್ಲುದೆ!
ಕರ್ಮಸ್ಥಿತಿ ಬೆನ್ನ ಬಿಡದು.
ಅನಂತ ಕೋಟಿ ಸನ್ಮಾನವ ಮಾಡಿದಡೇನು?
ನಿಮಿಷದ ಉದಾಸೀನ ಕೆಡಿಸಿತ್ತು! ಲಿಂಗದೇವಾ
ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯಾ.
- ಬ.ವ.ದೀ.383

ಕಟ್ಟಿಗೆ ಉರಿಯುವ ಕಡೆಗೆ ಇರುವ ಹಂಚಿನ ಭಾಗ ಕಾಡಿಗೆಯಿಂದ ಕೂಡಿರುತ್ತದೆ. ಅದನ್ನು ಎಷ್ಟು ತೊಳೆದರೂ ಅದೇನೂ ಬಿಳಿದಾಗದು. ಅದೇ ರೀತಿ ಕೆಲವೊಮ್ಮೆ ಕರ್ಮವು ಕಾಡುತ್ತಿರುತ್ತದೆ. ಅದು ಎತ್ತೆತ್ತಲೋ ಎಳೆದುಕೊಂಡು ಹೋಗುತ್ತದೆ. ಒಬ್ಬ ವ್ಯಕ್ತಿಗೆ ಅನಂತಕೋಟಿ ಸನ್ಮಾನವನ್ನು ಮಾಡಲಾಗಿರುತ್ತದೆ. ಯಾವುದೋ ಕ್ಷಣದಲ್ಲಿ ಅವನನ್ನು ಉದಾಸೀನತೆಯಿಂದ ಕಾಣಲಾಗಿ ಅಷ್ಟುದಿನ ನೀಡಿದ ಸನ್ಮಾನದ ಪರಿಣಾಮ ಹೋಗಿಯೇ ಬಿಡುತ್ತದೆ. ಕೆಲವೊಮ್ಮೆ ಒಬ್ಬ ವ್ಯಕ್ತಿಯ (ಜಂಗಮನ) ಬಗ್ಗೆ ತುಂಬಾ ಗೌರವವನ್ನು ತೋರಿಸಲಾಗಿರುತ್ತದೆ. ಏನೋ ಅಪಪ್ರಚಾರ ಸುಳಿಯುತ್ತಲೇ ಅವನ ಬಗೆಗಿರುವ ಗೌರವ ಕುಸಿಯುತ್ತದೆ. ಮನಸ್ಸು ತೊಳಲಾಡುತ್ತದೆ. ಅದನ್ನೇ ಧರ್ಮಪಿತರು ಇಲ್ಲಿ ವ್ಯಕ್ತ ಪಡಿಸಿ, 'ಬಹಳ ಜನರು ನಂಬಿಯೂ ನಂಬದ ಡಂಭಕರಾಗಿರುತ್ತಾರೆ. ಬಹಳ ಬೇಗನೆ ಅಪಪ್ರಚಾರದ ಮಾತುಗಳಿಗೆ ಬಲಿಯಾಗುತ್ತಾರೆ.' ಎಂದು ವಿಷಾದಿಸುತ್ತಾರೆ.

ಕ್ಷಣ ಹೊತ್ತು ಆಣಿಮುತ್ತು

-ಎಸ್.ಷಡಕ್ಷರಿ

ಆನಂದ, ಈ ಊರಿಗೆ ಏಕೆ ಬಂದ ?

ಇಲ್ಲೊಂದು ಕುತೂಹಲಕಾರಿ ಕತೆಯಿದೆ. ಶತಶತಮಾನಗಳ ಹಿಂದಿನ ಬುದ್ಧ ಭಗವಾನರ ಬದುಕಿನ ಒಂದು ಘಟನೆ.

ಒಮ್ಮೆ ಭಗವಾನರು ಕೌಶಂಬಿ ನಗರಕ್ಕೆ ಬಂದರು. ಆದರೆ ಅಲ್ಲಿ ಅಧಿಕಾರದಲ್ಲಿದ್ದವರಿಗೆ ಬುದ್ಧ ಭಗವಾನರನ್ನು ಕಂಡರೆ ಅಷ್ಟಕಷ್ಟೆ. ಭಗವಾನರು ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ತರುತ್ತಿದ್ದ ಬದಲಾವಣೆ ಅವರಿಗೆ ಅಪಥ್ಯ. ಹಾಗಾಗಿ ಅವರು ಬುದ್ಧ ಭಗವಾನರ ಬಗ್ಗೆ ಬಹಳಷ್ಟು ಅಪಪ್ರಚಾರ ಮಾಡಿದರು. ಅಪಪ್ರಚಾರದ ದೆಸೆಯಿಂದಾಗಿ ಭಗವಾನರ ಪ್ರವಚನಗಳಿಗೆ ಸ್ಥಳೀಯರು ಒಂದೆರಡು ದಿನಗಳಾದರೂ ಬರಲೇ ಇಲ್ಲ. ಅಷ್ಟೇ ಅಲ್ಲ, ಆ ಊರಿನಲ್ಲಿ ಭಗವಾನರಿಗೆ ಮತ್ತವರ ಶಿಷ್ಯರುಗಳಿಗೆ ತಿಂಡಿ -ಊಟಗಳ ವ್ಯವಸ್ಥೆಯೂ ಸರಿಯಾಗಿರಲಿಲ್ಲ.

ಮಾರನೆಯ ದಿನ ಭಗವಾನರ ಶಿಷ್ಯ ಆನಂದರು ಭಗವಾನರ ಬಳಿ ಬಂದು 'ಈ ಊರಿನಲ್ಲಿ ನಮಗೆ ತಿಂಡಿ -ಊಟಗಳೂ ಸರಿಯಾಗಿ ಸಿಗುತ್ತಿಲ್ಲ. ನಾವೆಲ್ಲ ತಿನ್ನಲು ಏನೂ ಸಿಗದೆ ಕುಳಿತಿದ್ದೇವೆ. ಅಧಿಕಾರಸ್ಥರು ಮಾಡುತ್ತಿರುವ ಅಪಪ್ರಚಾರದಿಂದ ಊರಿನ ಜನರೆಲ್ಲರೂ ನಮ್ಮನ್ನು ಅನುಮಾನದಿಂದಲೇ ನೋಡುತ್ತಾರೆ. ಪ್ರವಚನಗಳಿಗೂ ಜನ ಬರುತ್ತಿಲ್ಲ. ನಮಗೆ ಈ ಊರು ಒಂದೇನೇ? ಮುಂದಿನ ಊರಿಗೆ ಹೋದರಾಯಿತು' ಎಂದರು. ಭಗವಾನರು ಸದಾ ಪ್ರಸನ್ನ ವದನರು. ಅವರು ನಸುನಕ್ಕು 'ಮುಂದಿನ ಊರಿನಲ್ಲಿ ಹೀಗೆಯೇ ಆದರೆ ಏನು ಮಾಡುವುದು?' ಎಂದು ಕೇಳಿದರು. ಆನಂದರು ಅದರ ಮುಂದಿನ ಊರಿಗೆ ಹೋದರಾಯಿತು ಎಂದರು. ಭಗವಾನರು 'ಮತ್ತೆ ಆ ಊರಿನಲ್ಲೂ ಹಾಗೆಯೇ ಆದರೆ, ಆಗೇನು ಮಾಡುವುದು?' ಎಂದು ಕೇಳಿದರು. ಆನಂದರು 'ಈ ಪ್ರದೇಶವನ್ನೇ ಬಿಟ್ಟು ಹೋಗಿ ಮತ್ತೊಂದು ಪ್ರದೇಶಕ್ಕೆ ಹೋದರಾಯಿತು' ಎಂದರು. ಭಗವಾನರು ಉಳಿದ ಶಿಷ್ಯರುಗಳ ಕಡೆ ನೋಡಿ 'ಆನಂದ ಈ ಊರಿಗೆ ಏಕೆ ಬಂದ? ನಾವೆಲ್ಲ ಈ ಊರಿಗೆ ಏಕೆ ಬಂದಿದ್ದೇವೆ? ನಮ್ಮ ಈ ಊರಿನ ಭೇಟಿಯ ಉದ್ದೇಶವೇನು? ತಿಂಡಿ -ಊಟಗಳನ್ನು ಇನ್ನುತ್ತಾ, ಆರಾಮವಾಗಿ ಇರುವುದಕ್ಕೋ ಅಥವಾ ಮತ್ತೇನಾದರೂ ಕಾರಣ ಉಂಟೋ?' ಎಂದು ಕೇಳಿದರು. ಶಿಷ್ಯರುಗಳು 'ಧರ್ಮಪ್ರಚಾರವೇ ಆನಂದರು ಮತ್ತು ನಾವೆಲ್ಲ ನಿಮ್ಮೊಟ್ಟಿಗೆ ಈ ಊರಿಗೆ ಬಂದಿರುವ ಮುಖ್ಯ ಉದ್ದೇಶ! ತಿನ್ನುವುದು, ಕುಡಿಯುವುದು, ಆರಾಮವಾಗಿ ಇರುವುದು ಇವೆಲ್ಲ ಪ್ರಮುಖ ವಿಷಯಗಳಲ್ಲ' ಎಂದರು. ಭಗವಾನರು 'ಆನಂದ ಹಾಗಿದ್ದರೆ ನಾವಿಲ್ಲಿಗೆ ಬಂದಿರುವ ಪ್ರಮುಖ ಉದ್ದೇಶವನ್ನು ಆಚರಣೆಗೆ ತರುವುದರಲ್ಲಿ ಯಶಸ್ವಿಯಾದರೆ ತಿಂಡಿ -ಊಟಗಳು, ಇರುವುದಕ್ಕೆ ಅನುಕೂಲಕರ ವಾತಾವರಣ ಸಿಕ್ಕೇ ಸಿಗುತ್ತವೆ' ಎಂದುಬಿಟ್ಟರು.

ಭಗವಾನರು ತಮ್ಮ ಪ್ರವಚನಗಳನ್ನು ಮುಂದುವರಿಸಿದರು. ಇದನ್ನು ಗಮನಿಸಿದ ಆ ಊರಿನ ಕೆಲವು ಜನ ಕುತೂಹಲದಿಂದ ಮರುದಿನದ ಪ್ರವಚನಗಳಿಗೆ ಬಂದರು. ಭಗವಾನರನ್ನು ನೋಡಿದ ಮೇಲೆ, ಮಾತುಗಳನ್ನು ಕೇಳಿದ ಮೇಲೆ ಅವರಿಗೆ ತಾವು ಕೇಳಿದ್ದ ಅಪಪ್ರಚಾರದ ಮಾತುಗಳಲ್ಲಿ ಹುರುಳಿಲ್ಲ ಎನಿಸಿತು. ಅವರು ತಮ್ಮ ಅಭಿಪ್ರಾಯಗಳನ್ನು ಇತರರಿಗೂ ಹೇಳಿದರು. ಅದರ ಮರು ದಿನ ಪ್ರವಚನಕ್ಕೆ ಬಂದವರ ಸಂಖ್ಯೆ ಇನ್ನೂ ಹೆಚ್ಚಾಗಿತ್ತು. ವಾರ ಕಳೆಯುವಷ್ಟರಲ್ಲಿ ನೂರಾರು ಜನ ಭಗವಾನರ ಮಾತು ಕೇಳಲು ಬರಹತ್ತಿದ್ದರು. ಹಾಗೆ ಬಂದ ಜನರು ಭಗವಾನರಿಗೆ ಮತ್ತು ಅವರ ಶಿಷ್ಯರುಗಳಿಗೆ ಸೂಕ್ತ ಊಟೋಪಚಾರದ ಮತ್ತು ವಸತಿಯ ವ್ಯವಸ್ಥೆಯನ್ನೂ ಮಾಡಿದರು.

ನಾವು ಕೌಶಂಬಿ ನಗರಕ್ಕೆ ಹೋಗದಿರಬಹುದು! ಆದರೆ ಕಾಲೇಜುಗಳಿಗೆ ಹೋಗುತ್ತೇವೆ. ಕಛೇರಿಗಳಿಗೆ ಹೋಗುತ್ತೇವೆ. ಕಾರ್ಯಕ್ರಮಗಳಿಗೆ ಹೋಗುತ್ತೇವೆ. ಕಾರ್ಯಮಗ್ನರಾಗುತ್ತೇವೆ. ನಾವು ನಮ್ಮ ಮುಖ್ಯ ಉದ್ದೇಶವೇನೆಂದು ಕೇಳಿಕೊಂಡರೆ, ಅದನ್ನು ಆಚರಣೆಗೆ ತಂದರೆ, ಆಗ ನಮಗೂ ಯಶಸ್ಸು ಸಿದ್ಧಿಸುತ್ತದೆ! ತಿಂಡಿ -ಊಟಗಳು ಸಿಕ್ಕೇ ಸಿಗುತ್ತವೆ. ಅನುಕೂಲಕರ ವಾತಾವರಣವೂ ಸಿಗುತ್ತದೆ! ನಾವೆಲ್ಲ ತಿನ್ನುವುದಕ್ಕಾಗಿಯೇ ಹುಟ್ಟಿ ಬಂದವರಲ್ಲ ಅಲ್ಲವೇ? (ವಿ.ಕ. 30-3-2010)

ಗೋಹತ್ಯ ನಿಷೇಧ ಮತ್ತು ಸಾವರ್ಕರ್

ವಿಧಾನ ಸಭೆಯಲ್ಲಿ ಗೋಹತ್ಯೆ ನಿಷೇಧ ಮಸೂದೆಯನ್ನು ಅಂಗೀಕರಿಸಲಾಗಿದೆ. ಇದಕ್ಕೆ ಪರ ಮತ್ತು ವಿರೋಧವೂ ವ್ಯಕ್ತವಾಗಿದೆ. ಚುನಾವಣೆಯ ಸಂದರ್ಭ ಇದಕ್ಕೆ ಕಾರಣವಿರಬಹುದು. ಧರ್ಮನಿರಪೇಕ್ಷ ಸಂವಿಧಾನವನ್ನು ಒಪ್ಪಿರುವ ನಾವು ಗೋಹತ್ಯೆಯಂಥ ಧಾರ್ಮಿಕ ಮತ್ತು ಭಾವನಾತ್ಮಕ ವಿಷಯವನ್ನು ವೈಚಾರಿಕ ನಿಕಷಕ್ಕೆ ಒಡ್ಡಬೇಕಲ್ಲದೆ ಚುನಾವಣೆಯ ದೃಷ್ಟಿಯಿಂದ ನೋಡಬಾರದು.

ಈ ನಿಟ್ಟಿನಲ್ಲಿ ಹಿಂದೂರಾಷ್ಟ್ರ ಪ್ರತಿಪಾದಕರಾಗಿದ್ದ ವಿನಾಯಕ ದಾಮೋದರ ಸಾರ್ವಕರ್ ಅವರ ಗೋವಿನ ಕುರಿತ ವಿಚಾರಗಳು ಗಮನಾರ್ಹ (''ಆಕಳು ಒಂದು ಉಪಯುಕ್ತ ಪ್ರಾಣಿ, ಮಾತೆಯಲ್ಲ ದೇವತೆಯೂ ಅಲ್ಲವೇ ಅಲ್ಲ.'' ಮಹಾರಾಷ್ಟ್ರ ಶಾರದಾ ಏಪ್ರಿಲ್ 1935)

'...... ಹಸು ಎತ್ತುಗಳನ್ನು ಪೂಜಿಸುವುದು ಹಿಂದೂ ಧರ್ಮಕ್ಕೆ ವಿಶಿಷ್ಟವಾದ ಸಂಗತಿಯಲ್ಲ, ಪ್ರಪಂಚದ ವಿವಿಧ ಕಡೆ ಜೀವಸೃಷ್ಟಿಗೆ ಕಾರಣವಾದ ಪುರುಷ ಮತ್ತು ಸ್ತ್ರೀಯರ ಅವಯವಗಳ ಪ್ರತೀಕಗಳಾಗಿ ವೃಷಭ ಮತ್ತು ಗೋವಿನ ಪೂಜೆ ನಡೆಯುತ್ತಿತ್ತು.

'.....ನಾನು ಕಂಡ ಹಲವು ಪ್ರಾಮಾಣಿಕ, ಶ್ರೇಷ್ಠ, ಸಭ್ಯ ಗೋಭಕ್ತರು ಗೋಮಾತೆಯ ಗಂಜಲ ಮತ್ತು ಸಗಣಿಗಳಿಗೆ ಬ್ರಹ್ಮವಾದದ ಆಧಾರ ನೀಡಿ ಪಂಚಗವ್ಯ ಸೇವಿಸುತ್ತಾರೆ. ಗಂಜಲವನ್ನು ದೇವಾಲಯದಲ್ಲಿ ಸಿಂಪಡಿಸುತ್ತಾರೆ. ಆದರೆ ಅವರಿಗಿಂತಲೂ ಪ್ರಜ್ಞಾವಂತರಾದ ಡಾ|| ಅಂಬೇಡ್ಕರ್‌ರಂಥ ಶುದ್ಧ ಮತ್ತು ಪೂರ್ವಾಸ್ಪೃಶ್ಯರ ಕೈಯಿಂದ ನಿರ್ಮಲ ಗಂಗೋದಕ ಕುಡಿಯುವುದಿಲ್ಲ! ಅದು ಮೈಗೆ ಸಿಂಪಡಿಸಿದರೂ ಮೈಲಿಗೆಯಾಯಿತೆಂದು ಸ್ನಾನ ಮಾಡುತ್ತಾರೆ.

ಹಸು ದೇವತೆ ಎಂದು ಪುರಾಣಗಳು ಹೇಳುತ್ತವೆ. ಹಾಗೆಯೇ ವರಾಹಾವತಾರಿಯಾದ ದೇವರೂ ಹಂದಿ ಎಂದು ಪುರಾಣ ಹೇಳುತ್ತದೆ. ಹೀಗಿರುವಾಗ- ಗೋರಕ್ಷಣೆಯೇ ಏಕೆ ಬೇಕು? ಹಂದಿ ರಕ್ಷಣೆ ಸಂಘವನ್ನು ಸ್ಥಾಪಿಸಿ ಹಂದಿಪೂಜೆಯನ್ನೇಕೆ ಬಳಕೆಗೆ ತರಬಾರದು? ಮನುಷ್ಯನು ಎಲ್ಲ ರೀತಿಯಿಂದ ತನಗಿಂತ ಹೀನಗುಣವಿರುವ ಪಶುವನ್ನು ದೇವರೆಂದು ಒಪ್ಪುವುದರಿಂದ ಮನುಷ್ಯನನ್ನೇ ಪಶುವಿಗಿಂತಲೂ ಕೀಳೆಂದು ಒಪ್ಪಿ ಮಾನವೀಯತೆಯನ್ನು ಗೌಣಗೊಳಿಸಿದಂತಾಗುತ್ತದೆ.

ಮನುಷ್ಯ ಎಲ್ಲ ದೃಷ್ಟಿಯಿಂದ ತನಗಿಂತಲೂ ಸರ್ವಶ್ರೇಷ್ಠವಾದ ಪ್ರತೀಕವನ್ನು ಮಾತ್ರ ದೇವರೆಂದು ಸ್ವೀಕರಿಸಬೇಕು. ಕತ್ತೆ ಬೇಕಾದರೆ ಗೋವನ್ನು ತನಗಿಂತ ಶ್ರೇಷ್ಠ ಎಂದು ಸ್ವೀಕರಿಸಲಿ. ಆದರೆ ಮನುಷ್ಯ ಹಾಗೆ ಮಾಡುವುದು ಮೂರ್ಖತನ. ಇಂದಿನ ಪರಿಸ್ಥಿತಿಯಲ್ಲಿ ಅರ್ವಾಚೀನ ಮತ್ತು ಪ್ರಯೋಗಸಿದ್ಧ ವಿಜ್ಞಾನವೇ ನಮ್ಮ ರಾಷ್ಟ್ರದ ವೇದವಾಗಬೇಕು. ಈ ಪ್ರವೃತ್ತಿಗೆ ಗೋಪೂಜೆ ಹೊಂದಿಕೆಯಾಗದಿದ್ದರೆ ಅದನ್ನು ಬಿಡಬೇಕು. ಇಂಥ ಮೂರ್ಖತನಕ್ಕೆ ಧರ್ಮ ಎಂದು ಪುರಾಣಗಳು ಹೇಳಿರುವುದಕ್ಕೆ ತಲೆದೂಗಿದರೆ ರಾಷ್ಟ್ರದ ಸರ್ವನಾಶ. ಖಂಡಿತ. ಗೋಪೂಜೆಯಿಂದಾಗುವ ಲಾಭಕ್ಕಿಂತ ಹಾನಿ ಅತ್ಯಂತ ಘಾತುಕ. ಒಂದು ವೇಳೆ ಗೋಹತ್ಯೆ ನಡೆದರೂ ಅಡ್ಡಿಯಿಲ್ಲ, ರಾಷ್ಟ್ರದ ಬುದ್ಧಿಹತ್ಯೆ ಮಾತ್ರ ಆಗಬಾರದು. ಹಸು ಮತ್ತು ಎತ್ತು ನಮ್ಮ ಕೃಷಿ ಪ್ರಧಾನ ರಾಷ್ಟ್ರಕ್ಕೆ ಉಪಯುಕ್ತ ಪ್ರಾಣಿಗಳು ಎಂದು ಆ ಪ್ರಾಣಿಗಳನ್ನು ಎಷ್ಟು ಬೇಕೊ ಅಷ್ಟೆ ಬಳಸಿದರೆ ಸಾಕು. ಆದರ ಬದಲು ಅದು ದೇವತೆ. ಪುರಾಣದಲ್ಲಿ ಅದನ್ನು ಪೂಜಿಸುವುದನ್ನು ಧರ್ಮ ಎಂದು ಹೇಳಿದೆ ಎಂದು ಬೊಗಳೆ ಬಿಟ್ಟರೆ ರಾಷ್ಟ್ರಕ್ಕೆ ಮೂರುಪಟ್ಟು ಹಾನಿಯಾಗುತ್ತದೆ. ಅಲ್ಪ ಲಾಭಕ್ಕಾಗಿ ಹೆಚ್ಚಿನದನ್ನು ಕಳೆದುಕೊಳ್ಳುತ್ತೇವೆ.

ಪಶುವನ್ನು ದೇವರೆಂದು ಹೇಳಿದರೂ ದೇವರನ್ನೇ ಪಶುವಿಗಿಂತಲೂ ಹೀನವಾಗಿ ಕಾಣಲಾಗಿದೆ. ಹಸುವಿನ ಶರೀರದಲ್ಲಿ 33 ಕೋಟಿ ದೇವತೆಗಳಿದ್ದಾರೆಂದು ಬಣ್ಣಿಸಿ, ಅದರ ಗಂಜಲ, ಸಗಣಿ ವಿಸರ್ಜನೆಯಾಗುವ ಸ್ಥಳಗಳಲ್ಲಿಯೂ ದೇವರನ್ನು ಸ್ಥಾಪಿಸಲಾಗಿದೆ! ಕಟುಕನು ಒಂದೇ ಹೊಡೆತಕ್ಕೆ ದನವನ್ನು ಕೊಲ್ಲುವಾಗ ಆ ದೇವತೆಗಳಲ್ಲಿ ಒಬ್ಬನಾದರೂ ಕಟುಕನನ್ನು ಏಕೆ ತಡೆಯುವುದಿಲ್ಲ? ಆ ದೇವರೂ ಭಕ್ತರಂತೆ ಹೇಡಿಯೇ? ಕಟುಕನೇ? 33 ಕೋಟಿ ದೇವತೆಗಳಿಗಿಂತ ಪರಾಕ್ರಮಿಯೇ?

ಹಸು ಮಹಾಮಾತೆಯಾಗಿರುವವನೇ ಹಿಂದೂ ಎನ್ನುವುದು ಹಿಂದುತ್ವಕ್ಕೆ ಮಾಡಿದ ಅಪಮಾನ. ಹಸು ಕರುವಿಗೆ ಮಾತ್ರ ತಾಯಿ. ಹಿಂದುಗಳಿಗಲ್ಲ. ಗೋರಕ್ಷಣೆಯೇ ಧರ್ಮ. ಸ್ವಧರ್ಮೇ ನಿಧನಂ ಶ್ರೇಯಃ ಎಂದಾಗ ವಿವೇಕ, ಬುದ್ಧಿ ಸಂಪೂರ್ಣ ಕುರುಡಾಗಿ ಪ್ರಜ್ಞೆ ತಪ್ಪಿದ ಅನುಭವವಾಗುತ್ತದೆ. ಇಂಥ ಅನಾಗರಿಕ ಮತ್ತು ಮೂರ್ಖ ಸಂಸ್ಕಾರಕ್ಕೆ ತಿಲಾಂಜಲಿ ನೀಡುವುದೇ ನಮ್ಮ ಧರ್ಮ ಮತ್ತು ಸಂಸ್ಕೃತಿಗೆ ಶೋಭಿಸುವ ಮಾರ್ಗ. ಇಂದಿನ ವೈಜ್ಞಾನಿಕ ಯುಗದಲ್ಲಿ ಗೋರಕ್ಷೆಯ ದೃಷ್ಟಿಯಿಂದ ಹಸುವನ್ನು ದೇವತೆ ಎಂದು ಒಪ್ಪುವುದು ಮೂರ್ಖತನ. ಗೋರಕ್ಷಣೆಗೆ ಧಾರ್ಮಿಕ ಸ್ವರೂಪ ಬಿಟ್ಟು ಆರ್ಥಿಕ, ವೈಜ್ಞಾನಿಕ ಸ್ವರೂಪ ನೀಡುವುದು ಉಚಿತ. ಹಸು ಎತ್ತುಗಳನ್ನು ದೇವರೆಂದು ತೋರಿಸುತ್ತ ತಿರುಗುವ ಗೋಭಕ್ತನನ್ನು ತಡೆದು ಎತ್ತನ್ನು ನೊಗಕ್ಕೆ ಹೂಡಬೇಕು; ಅವನನ್ನು ದೇಶ ಸೇವೆಗೆ ದುಡಿಸಬೇಕು. (ಸಾವರಕರ: ಒಂದು ಅಭಿನವ ದರ್ಶನ, ಅನುವಾದ : ಚಂದ್ರಕಾಂತ ಪೋಕಳೆ ಬೆಳಗಾವಿ)

ಪ್ರಜಾವಾಣಿ -ದಿ.30-3-2010

ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಪ್ರವೇಶಾವಕಾಶ

ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಅನಾಥಾಲಯ, ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಇವುಗಳಿಗೆ ಪ್ರವೇಶಾವಕಾಶವಿದೆ.

1. ವೃದ್ಧಾಶ್ರಮ : 60 ವರ್ಷ ಮೇಲ್ಪಟ್ಟ ಸ್ತ್ರೀಯರು ಹಾಗೂ ಪುರುಷರಿಗೆ ಅವಕಾಶ ಮಕ್ಕಳಿಲ್ಲದವರು, ಮಕ್ಕಳಿದ್ದೂ ಆಶ್ರಯವಿಲ್ಲದವರು, ನಿರ್ಗತಿಕ ವಯೋವೃದ್ಧರು ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2. ಶುಲ್ಕ ಸಹಿತವಾಗಿ ಪ್ರತ್ಯೇಕ ಮನೆ (ಕಾಟೇಜ್)ಯಲ್ಲಿ ಇರಬಯಸುವವರಿಗೆ ಟ್ರಸ್ಟ್ ವಿಶೇಷ ವ್ಯವಸ್ಥೆ ಮಾಡಲಿದೆ. ದಂಪತಿಗಳೇ ಇರಲಿ, ಒಬ್ಬರೇ ಇರಲಿ ಅವರ ಖರ್ಚಿಗಾಗಿ ನಿಗದಿಪಡಿಸಿದ ಶುಲ್ಕ ಕೊಡುವವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು.
3. ಬಸವ ಗಂಗೋತ್ರಿ ಸಂಸ್ಥೆಯು ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜ್ ಡಾನ್ ಬಾಸ್ಕೊ ಎಂಜಿನಿಯರಿಂಗ್ ಕಾಲೇಜ್, ಎಂ.ಬಿ.ಎ., ಕಾಲೇಜ್ ಮುಂತಾದುವಕ್ಕೆ ತೀರಾ ಹತ್ತಿರದಲ್ಲಿ ಇರುವುದರಿಂದ ಆಯ್ದ ವಿದ್ಯಾರ್ಥಿಗಳಿಗೆ ಪೇಯಿಂಗ್ ಗೆಸ್ಟ್ ವ್ಯವಸ್ಥೆಯಿದ್ದು ವಸತಿ ಮತ್ತು ಊಟದ ಅನುಕೂಲತೆ ಇದೆ. ಅವರಿಗೆ ಬಸವ ದರ್ಶಿನಿ ಹೋಟೆಲ್‌ದವರು ಊಟದ ವ್ಯವಸ್ಥೆ ಮಾಡುತ್ತಾರೆ. ಸೀಮಿತ ಸಂಖ್ಯೆಯಲ್ಲಿ ಪ್ರವೇಶಾವಕಾಶವಿದೆ.
4. ಅನಾಥಾಲಯ : ತಾಯಿ ಅಥವಾ ತಂದೆ ಇಬ್ಬರೂ ಇಲ್ಲದವರು. ಅಥವಾ ಇಬ್ಬರಲ್ಲಿ ಒಬ್ಬರು ತೀರಿಕೊಂಡವರು ಇದಕ್ಕೆ ಅರ್ಹರು. ಒಂದನೆಯ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಪ್ರವೇಶಾವಕಾಶ.
5. ಆಶಾಕಿರಣ ಯೋಜನೆ : ಇದರ ಅನ್ವಯ ಒಂದರಿಂದ ಏಳನೆಯ ತರಗತಿಯವರೆಗೆ 14 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಪ್ರವೇಶಾವಕಾಶ. ತಾಯಿ/ತಂದೆ ಇದ್ದರೂ ಪರವಾಗಿಲ್ಲ, ಬಡ ಮತ್ತು ಪ್ರತಿಭಾವಂತ ಮಕ್ಕಳಿಗೆ ವಿಶೇಷ ಶಿಕ್ಷಣ.

ಈ ಎಲ್ಲ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕೆಂಬ ಮತ್ತು ಆವಶ್ಯಕತೆ ಇರುವ ಜನರು ವ್ಯವಹರಿಸುವ ವಿಳಾಸ.

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ,
ವ್ಯವಸ್ಥಾಪಕರು
ಬಸವಗಂಗೋತ್ರಿ ಆಶ್ರಮ
ಕುಂಬಳಗೋಡು – 560074, ಬೆಂಗಳೂರು

ಸಿಟಿ ಮಾರುಕಟ್ಟೆಯಿಂದ ಬಸವ ಗಂಗೋತ್ರಿಗೆ
ಹೋಗುವ ಸಿಟಿ ಬಸ್ಸುಗಳು
223, 224, 226
ಮೆಜೆಸ್ಟಿಕ್‌ನಿಂದಲೂ ಬಸ್ಸುಗಳು.
ಬಿಡದಿ, ರಾಮನಗರ

ಭಾರತ ಸಂವಿಧಾನಕ್ಕೆ 'ಭೂತ 'ಚೇಷ್ಟೆ

- ದೇವನೂರು ಮಹಾದೇವ

ನಮ್ಮ ಸಂವಿಧಾನಕ್ಕೆ 60 ವರ್ಷಗಳ ಇತಿಹಾಸವಿದೆ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಇಂದೂ ಕೂಡ ಅಗೋಚರವಾಗಿ ಆಳ್ವಿಕೆ ನಡೆಸುತ್ತಿರುವ ಅಲಿಖಿತ ಸಂವಿಧಾನವೂ ಒಂದಿದೆ. ಇದು ಭಾರತದ ಮನೋಭೂಮಿಕೆಯಲ್ಲಿದೆ. ಇದು ಭೂತಕಾಲದ ಸಂವಿಧಾನ. ಇದು ಭಾರತದ ಸುಪ್ತಪ್ರಜ್ಞೆಯ ಆಳದಲ್ಲಿದೆ. ಈ ಎರಡರ ನಡುವೆ ಯುದ್ಧ ಜರುಗುತ್ತಿದೆ. ಭೂತಕಾಲದ ಸಂವಿಧಾನವೂ ಇಲ್ಲಿ ಬಲವಾಗಿದೆ. ಹಾಗಾಗಿ ನಮ್ಮ ವರ್ತಮಾನ ಸಂವಿಧಾನದ ಆಸೆಗಳು ತೆವಳುತ್ತಿವೆ.

ಬಹಳ ಹಿಂದೆ ಡಾ.ಯು.ಆರ್. ಅನಂತಮೂರ್ತಿ ಅವರನ್ನು ಭೇಟಿ ಮಾಡಲು ಹಿರಿಯರೊಬ್ಬರು ಬಂದಿದ್ದರು. ಅವರು ಶುಭ್ರವಾದ ಬಿಳಿ ಬಟ್ಟೆ ಧರಿಸಿದ್ದರು. ಜುಟ್ಟು ಬಿಟ್ಟು ನಾಮ ಧರಿಸಿದ್ದರು. ಅವರು ಮಾತಾಡಿ ಹೋದ ಮೇಲೆ ಅನಂತಮೂರ್ತಿಯವರು ಈಗ ಬಂದಿದ್ದವರು ವೇದ, ಉಪನಿಷತ್, ಪುರಾಣ ಪಾರಂಗತರು ಎಂದರು. ಅವರು ತಾವೇ ಅಡಿಗೆ ಮಾಡಿಕೊಂಡು ಊಟ ಮಾಡುತ್ತಾರೆ. ಎಂದೂ ಹೇಳಿದರು. ಈ ಮಾತು ನನ್ನ ಮನಸ್ಸಲ್ಲಿ ಉಳಿದು ಬಿಟ್ಟಿತು. ತಮ್ಮ ಕೈಯಾರ ಮಾಡಿದ್ದನ್ನು ಮಾತ್ರ ಊಟ ಮಾಡುವ ಇವರಿಗೆ ವೇದ ಉಪನಿಷತ್‌ಗಳು ಹೇಳಿಕೊಟ್ಟಿದ್ದೇನು ಎಂಬ ಪ್ರಶ್ನೆ ನನ್ನೊಳಗೆ ಉಳಿದುಬಿಟ್ಟಿತು. ಈಗ ಅನ್ನಿಸುತ್ತಿದೆ ಇವರ ಉಗ್ರ ಮಡಿಯ ಅಸ್ತಿತ್ವದಲ್ಲೇ ಅಸ್ಪೃಶ್ಯತೆಯ ಪ್ರಚಾರವೂ ಅಂತರ್ಗತವಾಗಿದೆ ಅಂತ. ಅವರ ಮಡಿಯನ್ನು ಪಾರಂಪರಿಕ ಮೌಲ್ಯ ಎಂದು ಗೌರವಿಸಿದರೆ ನಾವು ಎಚ್ಚರದಲ್ಲಿ ಇಲ್ಲ ಎಂದೇ ಅರ್ಥ.

ಇನ್ನೊಂದು ಭೀಕರ ಉದಾಹರಣೆ ಕೊಡುತ್ತೇನೆ. ಪುರಿ ಜಗದ್ಗುರು ಅಸ್ಪೃಶ್ಯತೆಯನ್ನು ಎತ್ತಿ ಹಿಡಿದಾಗ ಭಾರತ ತಲ್ಲಣಿಸಲಿಲ್ಲ. ಅದು ಭೀಕರವಾಗಿ ಸಮಾಜಕ್ಕೆ ತಟ್ಟಲೇ ಇಲ್ಲ. ಪುರಿ ಜಗದ್ಗುರು ನಮಗೆ ಅಸಹ್ಯವಾಗಿ ಕಾಣಲೇ ಇಲ್ಲ. ಏಕೆಂದರೆ ನಮ್ಮ ವರ್ತಮಾನದ ಪ್ರಜ್ಞೆಯ ಸಂವಿಧಾನವು ಸಮಾನತೆಯನ್ನು ಮೌಲ್ಯ ಎಂದು ಪರಿಗಣಿಸಿದರೆ, ಭೂತಕಾಲದ ಸುಪ್ತಪ್ರಜ್ಞೆಯ ಸಂವಿಧಾನಕ್ಕೆ ಶ್ರೇಣಿಕೃತ ಸಮಾಜದ ಅಸ್ಪೃಶ್ಯತೆ, ತಾರತಮ್ಯಗಳೇ ಮೌಲ್ಯಗಳಾಗಿವೆ. ಹೀಗಿರುವಾಗ ಸಮಾಜವು ಯಾಕಾಗಿ ತಲ್ಲಣಿಸಬೇಕು? ಹೀಗಿದ್ದಾಗ ವರ್ತಮಾನದ ಸಂವಿಧಾನದ ಆಸೆಗಳು ತೆವಳದೆ ಮತ್ತೇನು ಮಾಡಲು ಸಾಧ್ಯ?

ಇಂದು ಚರ್ಚೆಯಾಗುತ್ತಿರುವ ಮತಾಂತರ ನಿಷೇಧದ ಪ್ರಸ್ತಾಪಕ್ಕೆ ಬಂದರೆ ಇಲ್ಲೂ ಕಾಣುವುದು ಇದನ್ನೇ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಹಾಗೂ ಪೇಜಾವರ ಮಠಾಧೀಶರಾದಿಯಾಗಿ ಅನೇಕರು ಮತಾಂತರ ನಿಷೇಧಕ್ಕಾಗಿ ಹಾತೊರೆಯುತ್ತಿದ್ದಾರೆ. ಶೂದ್ರನೊಬ್ಬ ನಿಮ್ಮ ಬ್ರಾಹ್ಮಣ ಜಾತಿಗೆ ಸೇರುತ್ತೇನೆಂದರೆ ಆಕಾಶ ನೋಡುವ ಮಠಾಧಿಪತಿಗಳು, ಹಾಗೇ ಬ್ರಾಹ್ಮಣ ಜಾತಿಗೆ ನನ್ನನ್ನು ವರ್ಗಾವಣೆ ಮಾಡಿ ಎಂದು ಶೂದ್ರನೊಬ್ಬ ಕೇಳಿದರೆ ಇದು ತನ್ನ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಸರ್ಕಾರ ಮತಾಂತರ ನಿಷೇಧಕ್ಕೆ ಚಿಂತಿಸುತ್ತಿರುವ ಕ್ರೌರ್ಯವು ಗಾಬರಿ ಹುಟ್ಟಿಸುತ್ತದೆ.

ಜಗತ್ತಿನಾದ್ಯಂತ ಎರಡೊ, ಮೂರೊ ಧರ್ಮಗಳಿದ್ದರೆ ಭಾರತದ ಪರಂಪರೆಯಲ್ಲಿ ನಾಲ್ಕಾರು ಧರ್ಮಗಳಿವೆ. ಮತಾಂತರದ ಚಲನೆಯು ಭಾರತದಲ್ಲಿ ಇದ್ದುದರಿಂದಲೇ ಹೀಗಾಗಿದೆ. ಈಗ ಭಾರತದಲ್ಲಿ ಜೈನ, ಬೌದ್ಧ, ಸಿಖ್ ಹಾಗೂ ಮತಾಂತರದ ಅವಕಾಶವಿರುವ ಲಿಂಗಾಯತ ಪರಂಪರೆಯ ಕೆಲವು ಧರ್ಮಗಳಿವೆ. ಲಿಂಗಾಯತ ತನ್ನ ಜಾತಿ ಬಿಟ್ಟರೆ ಭಾರತದ ದುಡಿಯುವ ವರ್ಗದ ಅಂದರೆ ಶೂದ್ರರ, ಅಸ್ಪೃಶ್ಯರ ಧರ್ಮವಾಗಬಹುದಾದ ಸತ್ವವು ಅದರೊಳಗಿನ್ನೂ ಹುದುಗಿದೆ. ಇವುಗಳಲ್ಲಿ ನಿಧಾನವಾಗಿ ಮತಾಂತರ ಜರುಗುತ್ತಲೇ ಇದೆ.

ಇದರ ನಡುವೆ ಹಿಂದೂ ಎಂಬ ಧರ್ಮದ ಹೆಸರನ್ನು ಪಡೆದುಕೊಂಡು ಸ್ಥಗಿತಗೊಂಡ ಸಾಮಾಜಿಕ ಪದ್ಧತಿಯೇ ಧರ್ಮವಾಗಿ ಇದ್ದು ಎಲ್ಲಾ ಧರ್ಮಗಳಿಗಿಂತಲೂ ಪ್ರಬಲವಾಗಿದೆ. ಶ್ರೇಣಿಯ ಸಮಾಜಕ್ಕಾಗಿ ಇರುವ ಕಾನೂನು ಕಟ್ಟಳೆಗಳೇ ಹಿಂದು ಎಂದಾಗಿದೆ. ಈ ಶ್ರೇಣಿಯ ಕಾನೂನು ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಇದು ಸಾವಿರಾರು ವರ್ಷಗಳಿಂದಲೂ ಧರ್ಮದ ವೇಷ ಧರಿಸಿಕೊಂಡು ವಂಚಿಸಿ, ವಂಚಿಸಿ ತನ್ನನ್ನು ಧರ್ಮವೆಂದೇ ಭಾವಿಸುವಂತೆ ಮಾಡಿಬಿಟ್ಟಿದೆ. ತನ್ನ ವಂಚನೆಗಳಿಗೆ ಭಾರತದ ಮಹೋನ್ನತ ಜ್ಞಾನ ಶಾಖೆಗಳಾದ ದರ್ಶನಗಳನ್ನೂ ಬೌದ್ಧ, ಜೈನ ಧರ್ಮಗಳನ್ನೂ ಮಾತಾಡುವ ವಸ್ತುವಾಗಿ ಬಳಸಿಕೊಂಡಿದೆ. ದೇವರನ್ನೂ ಅವತಾರ ಎತ್ತಿಸಿದೆ. ಇದೆಲ್ಲಾ ಯಾತಕ್ಕಾಗಿ ಅಂದರೆ ಶ್ರೇಣೀಕೃತ ಜಾತಿ, ವರ್ಣ, ಕಟ್ಟುಪಾಡುಗಳನ್ನು ಸುಪ್ತಪ್ರಜ್ಞೆಯಲ್ಲಿ ಸ್ಥಾಪಿಸುವುದಕ್ಕಾಗಿ. ಆದಕ್ಕಾಗೇ ಯಾವ ರಾಜ ಬಂದರೂ ರಾಜ ಧರ್ಮ ಅಂದರೆ ವರ್ಣ ವ್ಯವಸ್ಥೆಯನ್ನು ಕಾಪಾಡುವುದೇ ಆಗಿತ್ತು. ಹಿಂದುವಾಗಿ ಇರುವುದು ಅಂದರೆ ಇದ್ದ ಕಡೆ ಇರುವ ಶ್ರೇಣಿಯಲ್ಲಿ ಬಿದ್ದಿರು ಎಂದೇ ಅರ್ಥ. ಹಿಂದೂ ಗೋಮುಖ ವ್ಯಾಘ್ರನಲ್ಲಿ ವ್ಯಾಘ್ರನನ್ನು ಸಾಯಿಸಿದರೆ ಅಂದರೆ ಶ್ರೇಣೀಕೃತ ಜಾತಿ ಕಟ್ಟಳೆಗಳನ್ನು ಸಾಯಿಸಿದರೆ ಇದೂ ಒಂದು ಧರ್ಮವಾಗಬಹುದು. ಇದು ಸಾಧ್ಯವೆ. ಸಾಧ್ಯವಾದರೆ ಸಂವಿಧಾನದ ಆಶಯಗಳು ನಡೆಯಬಹುದು.

ಇದು ಸಾಧ್ಯವೇ? ಎಂದು ಪೇಜಾವರರನ್ನು ಪ್ರಾತಿನಿಧಿಕ ಮಾಡಿಕೊಂಡು ಕೇಳುತ್ತಿದ್ದೇನೆ. ಅವತಾರ ಎತ್ತಿಸಿಯಾದರೂ ಜಾತಿಯ ಶ್ರೇಣಿ ಇಲ್ಲದಂತೆ ಹಿಂದೂ ಸಮಾಜ ರೂಪಿಸಿ ಅದನ್ನು ಧರ್ಮ ಮಾಡಲು ಸಾಧ್ಯವಿದೆಯೆ? ಇದಾಗದಿದ್ದರೆ, ಹಿಂದೂ ಸಮಾಜದ ದೇವಸ್ಥಾನ, ಮಠ, ಇತ್ಯಾದಿಗಳಲ್ಲಿ ಮಠಾಧೀಶ ಸ್ಥಾನ, ಪೂಜೆ, ಇತ್ಯಾದಿ ನಿರ್ವಹಣೆಗಳಲ್ಲಿ ಸಕಲೆಂಟು ಜಾತಿಗೂ ಪರ್ಯಾಯ ವ್ಯವಸ್ಥೆ ತರಲು ಸಾಧ್ಯವಿದೆಯೆ ? ಉಡುಪಿಯಲ್ಲಿ ಅಷ್ಟಮಠಗಳ ಬದಲು ನವ ಮಠಗಳ ಪರ್ಯಾಯಕ್ಕಾಗಿ, ಡಿಮ್ಯಾಂಡ್ ಇಟ್ಟು ಕಾಯುತ್ತಿರುವವನಂತೆ ಇರುವ ಕನಕ ಇನ್ನೆಷ್ಟು ದಿನ ಕಾಯಬೇಕು? ಅಥವಾ ಅವನು ಹೊರಗಿರುವುದೇ ಧರ್ಮವೆ? ನೀವು ದಲಿತ ಕೇರಿಗೆ ಪಾದವಿಟ್ಟರೆ ಅದನ್ನೇ ಧನ್ಯ ಎಂದುಕೊಳ್ಳುವ ಆ ದಲಿತ ಕೇರಿಯ ಮಗುವೊಂದು ನಿಮ್ಮನ್ನು ಪ್ರೀತಿಸಿ ನಾನೂ ನಿಮ್ಮೊಡನೆ ಬರುತ್ತೇನೆ, ನನಗೂ ನೀವಾಗುವ ಆಸೆ ಎಂದರೆ ನೀವೇನು ಮಾಡುತ್ತೀರಿ? ಇಲ್ಲಿ ನೀವು ಅಂದರೆ ನೀವೇ ಅಲ್ಲ. ನಿಮ್ಮಂತೆ ಇರುವ ಎಲ್ಲರಿಗೂ ಇದು ಎದುರಾಗುತ್ತಿಲ್ಲ ಯಾಕೆ? ನಿಮ್ಮದೂ ಪತನದ ಸ್ಥಿತಿಯಲ್ಲವೇ? ನಿಮ್ಮಂಥವರಿಗೆ ಇಂಥವುಗಳನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಇಂಥವರ ದೇಹದೊಳಗಿನ ಆತ್ಮಸಾಕ್ಷಿ ಅಥವಾ ಸಾಕ್ಷಿ ಪ್ರಜ್ಞೆಯು ನೇಣಿಗೆ ಹಾಕಲ್ಪಟ್ಟಿರುತ್ತದೆ.

ನಮ್ಮ ಸಮಾಜದ ಸುಪ್ತ ಮನಸ್ಸು ಅಸ್ಪೃಶ್ಯತೆ, ಶ್ರೇಣಿಕೃತ ಜಾತಿ ಪದ್ಧತಿ, ತಾರತಮ್ಯಗಳ ಅಪಮೌಲ್ಯಗಳನ್ನೇ ಮೌಲ್ಯ ಮಾಡಿಬಿಟ್ಟಿದೆ. ಇದನ್ನು ಬಿತ್ತುವವರನ್ನು ಪೂಜ್ಯರು ಎಂದು ಪಟ್ಟಕಟ್ಟಿದೆ. ಈ ಪ್ರಭಾವಕ್ಕೆ ಒಳಗಾದವರೇ ಭಾರತದ ಸಂವಿಧಾನದ ಆಶಯಗಳನ್ನು ನಿರ್ಧರಿಸುವ ನಿರ್ವಹಿಸುವ ನಿರ್ಣಾಯಕ ಸ್ಥಾನಗಳಲ್ಲಿ ಹೆಚ್ಚಾಗಿ ಇರುವಾಗ, ಕಳೆದ ವರ್ಷದ ರಾಜ್ಯ ಬಜೆಟ್‌ನಲ್ಲಿ ದಲಿತರಿಗೆ ಮೀಸಲಿಟ್ಟ 4 ಸಾವಿರ ಕೋಟಿಗಳಲ್ಲಿ ಅರ್ಧದಷ್ಟನ್ನು ಕಾಟಾಚಾರಕ್ಕೆ ಖರ್ಚುಮಾಡಿ ಉಳಿದರ್ಧವನ್ನು ಲ್ಯಾಪ್ಸ್ ಮಾಡಿರುವ ಕ್ರಿಯೆ ಇಲ್ಲಿ ಸಹಜ ಅಲ್ಲವೆ? ದಲಿತರ ಮೀಸಲಾತಿ ಉದ್ಯೋಗಗಳಲ್ಲಿ ದಲಿತೇತರರು ನುಸುಳುತ್ತಿರುವುದು ಇಲ್ಲಿ ಸಹಜ ತಾನೆ? ನಮಗೆ ಅನ್ಯಾಯಗಳು, ಅನ್ಯಾಯಗಳಾಗಿ ಬಂದು ಮುಟ್ಟುತ್ತಿಲ್ಲ.

ಕನ್ನಡದಲ್ಲಿ ಒಂದು ಪದ ಇದೆ. - 'ಪಾಪ' ಅಂತ. ಇದನ್ನು ಪಾಪ (Sin)ಕ್ಕೂ ಬಳಸುತ್ತಾರೆ. ಹಾಗೇ ಕರುಣೆ (pity) ಗೂ ಬಳಸುತ್ತಾರೆ. ಪಾಪಕ್ಕೆ ಬಳಸಿದರೆ ಪಾಪಿಷ್ಟ ಆಗುತ್ತಾನೆ. ಕರುಣೆಗೆ ಬಳಸಿದರೆ ಪಾಪದವನು ಆಗುತ್ತಾನೆ. ಪಾಪದವನು ಒಂದು ಪಟ್ಟು ಪತನಗೊಂಡವನಾಗಿದ್ದರೆ ಪಾಪಿಷ್ಟನು

ನೂರು ಪಟ್ಟು ಪತನಗೊಂಡವನಾಗಿರುತ್ತಾನೆ. ಅಸ್ಪೃಶ್ಯತೆಗೆ ಅಥವಾ ತಾರತಮ್ಯಕ್ಕೆ ಒಳಗಾದವರು ಪಾಪದವರು ಆಗುತ್ತಾರೆ. ಇವರು ಮನೋಭೂಮಿಕೆಯಲ್ಲಿ ಅವೇ ತುಂಬಿರುತ್ತವೆ. ಈ ನಿಜದ ಎದುರು ಅಸ್ಪೃಶ್ಯತೆ, ತಾರತಮ್ಯ ಆಚರಿಸುವವರು ಪಾಪಿಷ್ಟರಾಗುತ್ತಾರೆ. 'ಗುಲಾಮನನ್ನು ಪಳಗಿಸಲು ಹೆಣಗುವ ಮಾಲೀಕನ ಮನಸ್ಸಿನ ತುಂಬಾ ಗುಲಾಮತನ ತುಂಬಿರುತ್ತದೆ.' ಎಂದು ಹೆಗಲ್ ಹೇಳುತ್ತಾನೆ. ನಾವು ನಮ್ಮ ಸಮಾಜವನ್ನು ನೋಡುವ ನೋಟಕ್ಕೆ ಈ ನಿಜದ ದರ್ಶನವಾದರೆ ಇದು ಸಂವಿಧಾನದ ಆಶಯಗಳತ್ತ ನಮ್ಮನ್ನು ನಡೆಸುತ್ತದೆ.

ಆದರೆ ಈ ಪಾಪದವರೂ ಎಚ್ಚರದ ಸ್ಥಿತಿಯಲ್ಲಿ ಇಲ್ಲ. ಮಧ್ಯಮ, ಜಾತಿಗೆ ಸೇರಿದ ನನ್ನ ಗೆಳೆಯನೊಬ್ಬ 'ಒಬ್ಬ ಚೋಟುದ್ದ ಬ್ರಾಹ್ಮಣ ಹುಡುಗ, ನಮ್ಮ ವಯಸ್ಸಾದ ಅಪ್ಪನನ್ನು ಏನಯ್ಯ ಗೌಡ, ಚೆನ್ನಾಗಿದ್ದೀಯಾ? ಅಂತ ಏಕವಚನದಲ್ಲಿ ಕೇಳ್ತಾನಲ್ಲಯ್ಯ!' ಎಂದು ಕುಪಿತನಾಗಿ ಹೇಳಿದ. ನಾನು ಅವನಿಗೆ ಹೇಳಿದೆ. 'ಸರಿಯಪ್ಪ, ನೀನು ಚಿಕ್ಕವನಾಗಿದ್ದಾಗ ನಮ್ಮ ಜಾತಿಯ ವಯಸ್ಸಾದವರಿಗೆ ಯಾವ ವಚನದಲ್ಲಿ ಕರೆಯುತ್ತಿದ್ದೆ?' ಎಂದು ಕೇಳಿದೆ. ಇಂಥವರಲ್ಲಿ ಸ್ವಾಭಿಮಾನದ ಎಚ್ಚರ ಅಂದರೆ ತನ್ನದು ಮಾತ್ರ ಆಗಿರುತ್ತದೆ. ಇನ್ನೊಂದರ ಪರಿವೆ ಇರುವುದಿಲ್ಲ. ಹಾಗೇ ದಲಿತರ ಮನಸ್ಥಿತಿಗೆ ಬಂದರೆ, ಉದಾಹರಣೆಗೆ ಮರಿಸ್ವಾಮಿ ಅಂತ ಒಬ್ಬರು ಹಿಂದಿ ಅಧ್ಯಾಪಕರಾಗಿ ಕೊನೆಗೆ ಬೌದ್ಧ ಭಿಕ್ಕುವಾಗಿ ಇತ್ತೀಚಿಗೆ ನಿಧರಾದರು. ಅವರು ಒಂದು ಕಡೆ ಬರೆಯುತ್ತಾರೆ 'ಚಿಕ್ಕವನಿದ್ದಾಗ ನಾನು ಅನುಭವಿಸುತ್ತಿದ್ದ ಅಸ್ಪೃಶ್ಯತೆಯ ಅವಮಾನಕ್ಕೆ ಜಗತ್ತು ಇರುವುದೇ ಹೀಗೆ ಅಂದುಕೊಂಡಿದ್ದೆ. ಯಾವಾಗ ಅಂಬೇಡ್ಕರ್ ಓದಿದೆನೋ ಆಗ ನನಗೆ ಅಸ್ಪೃಶ್ಯತೆಯ ಗಾಯವು ಗಾಯ ಅನ್ನಿಸಿದ್ದು' ಎನ್ನುತ್ತಾರೆ. ಭಾರತದ ಬಹುತೇಕ ಸಮುದಾಯಗಳು ಹೀಗೆ ಇವೆ.

ಇಂತಹ ಸ್ಥಿತಿಯಲ್ಲಿರುವ ಭಾರತದಲ್ಲಿ ವರ್ತಮಾನದ ಸಂವಿಧಾನವು ಪಾಪದವರನ್ನು ಮೇಲೆತ್ತಲು ಕೈಚಾಚಿದೆ. ಆದರೆ ಭೂತಕಾಲದ ಸಂವಿಧಾನ ಕಾಲೆಳೆಯುತ್ತಿದೆ. ಈ ಪಾಪದವರೂ ಎಚ್ಚರದಲ್ಲಿಲ್ಲ. ಸಂವಿಧಾನದ ಆಶಯಗಳ ಕಾಲೆಳೆಯುವ ಪಾಪಿಷ್ಟರು ಸಮಾಜದಲ್ಲಿ ಗಣ್ಯರೆನಿಸಿಕೊಂಡಿದ್ದರೆ, ಇವರ ವಂಶಸ್ಥರು ಹಾಗೂ ಇವರ ಪ್ರಭಾವದಲ್ಲಿರುವವರೇ ನಿರ್ಧರಿಸುವವರು ಮತ್ತು ನಿರ್ವಹಿಸುವವರು ಆಗಿದ್ದಾರೆ. ಸಂವಿಧಾನದ ಆಸೆಗಳು ಈಡೇರುವುದಾದರೂ ಹೇಗೆ? ಬಸ್ಸು, ರೈಲು ಕಾರಣಕ್ಕಾಗಿ ಅಕ್ಕಪಕ್ಕ ಕೂತಿದ್ದೇವೆ. ಹೋಟೇಲ್ ಕಾರಣಕ್ಕಾಗಿ ಸಹಪಂಕ್ತಿ ಭೋಜನ ಮಾಡಿದ್ದೇವೆ. ನೌಕರಿ ಕಾರಣಕ್ಕಾಗಿ ಒಟ್ಟಾಗಿ ಓಡಾಡಿದ್ದೇವೆ. ಅಲ್ಲಿ ಇಲ್ಲಿ ಮದುವೆಗಳೂ ಆಗಿವೆ. ಇಲ್ಲಿ ಆಗುತ್ತಿರುವ ಬದಲಾವಣೆಗಳು ಹೆಚ್ಚಾಗಿ ಬಹಿರಂಗ ಒತ್ತಡದವು. ಅಂತರಂಗ ಕತ್ತಲಲ್ಲೇ ಇದೆ.

ಏನೇನು ಮಾಡಬಹುದಿತ್ತು? ಮೊದಲ ಹೆಜ್ಜೆಯಾಗಿ, ವರ್ತಮಾನದ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪ್ರಜೆಗಳನ್ನು ರೂಪಿಸಲು ಶಿಕ್ಷಣ ಕ್ಷೇತ್ರವನ್ನು ತೆಪ್ಪ ಮಾಡಿಕೊಳ್ಳಬಹುದಿತ್ತು. ಶಿಕ್ಷಣ ಪಡೆಯುವ ಎಳೆಯರು ಆ ವಿದ್ಯೆಯಲ್ಲೇ ನಾಗರಿಕರೂ ಆಗುವಂತೆ ಶಿಕ್ಷಣವನ್ನೂ ರೂಪಿಸಬಹುದಿತ್ತು. ಸಮಾಜದಲ್ಲಿ ಅಸ್ಪೃಶ್ಯತೆ ತಾರತಮ್ಯ ಆಚರಿಸುವವರ ಬಗ್ಗೆ ಆ ಪದ್ಧತಿಗಳ ಬಗ್ಗೆ ಇರುವ ಭಯ ಭಕ್ತಿಗಳಲ್ಲಿ ಭಯ ಇರಲಿ, ಆದರೆ ಭಕ್ತಿಯನ್ನು ಇಲ್ಲದಂತೆ ಮಾಡಬೇಕಿತ್ತು. ಭಕ್ತಿಯು ಅಪಮೌಲ್ಯವನ್ನೇ ಮೌಲ್ಯವಾಗಿಸಿ ಬಿಡುತ್ತದೆ. ಈ ಅಪಾಯದ ಅರಿವು ನಮಗಿರಬೇಕಿತ್ತು. ಈ ಅರಿವು ಇದ್ದಿದ್ದರೆ ನಮ್ಮ ಶಿಕ್ಷಣದ ಪಠ್ಯ, ನಾವು ನೋಡುವ ದೃಷ್ಟಿಕೋನ ಎಲ್ಲವೂ ಹೊಸತಾಗಿ ಬಿಡುತ್ತಿತ್ತು. ಆಗ ಕೇವಲ ಮನುಷ್ಯ ಪ್ರಜ್ಞೆ ಕೆಲಸ ಮಾಡುತ್ತದೆ. ಆಗ ತಾರತಮ್ಯವನ್ನು ಮೌಲ್ಯವಾಗಿಸುವವರು ಪಳೆಯುಳಿಕೆಗಿಂತ ನಮ್ಮ ಸಮಾಜಶಾಸ್ತ್ರಜ್ಞರಿಗೆ ಕಾಣಬಹುದು. ಆಗ ಇಂತಹ ಸಾಮಾಜಿಕ ಸಾಂಸ್ಕೃತಿಕ ಅನಿಷ್ಟ ಪದ್ಧತಿಗಳು ಎಂದೋ ಅಥವಾ ಸಾಮಾಜಿಕ ಸಮಸ್ಯೆಗಳು ಎಂದೋ ಅಧ್ಯಯನದ ವಸ್ತುಗಳಾಗುತ್ತಿದ್ದವು. ರಾಜ್ಯಶಾಸ್ತ್ರದಲ್ಲಿ ಸಂವಿಧಾನದ ಅನುಷ್ಠಾನಕ್ಕೆ ಇರುವ ತೊಡಕುಗಳ ಪಟ್ಟಿಯಲ್ಲಿ

ಇದೂ ಸೇರ್ಪಡೆಯಾಗುತ್ತಿತ್ತು. ಮನಃಶಾಸ್ತ್ರದ ಸಮ್ಮೋಹಿನಿ ತಜ್ಞರು ಈ ಸುಪ್ತ ಪ್ರಜ್ಞೆಯ ತಾರತಮ್ಯಗಳನ್ನು ತಮ್ಮ ಅಧ್ಯಯನ ವಿಷಯ ಎಂದು ಪರಿಗಣಿಸಿ ಭೂತೋಚ್ಚಾಟನೆಯ ವಿಧಿ ವಿಧಾನಗಳನ್ನು ಕಂಡು ಹಿಡಿಯುವ ಪ್ರಯತ್ನಗಳಾಗುತ್ತಿದ್ದವು. ಶಿಕ್ಷಣ ತಜ್ಞರಿಂದ ಸಂವಿಧಾನದ ಆಶಯಗಳಿಗೆ ಪಠ್ಯ ರಚನೆಯಾಗುತ್ತಿತ್ತು.

ಭಾರತದ ಶಿಕ್ಷಣ ಕ್ಷೇತ್ರಕ್ಕೆ ಬಂದರೆ ಇಲ್ಲೂ ಏನಗಿದೆ? ಹಿಂದೆ ದ್ವಿಜರಲ್ಲದವರಿಗೆ ವಿದ್ಯೆ ವಂಚಿಸಲ್ಪಟ್ಟಿತ್ತು. ಈಗ ವರ್ತಮಾನದ ಸಂವಿಧಾನದಲ್ಲಿ ವಿದ್ಯೆ ಎಲ್ಲರಿಗೂ ಮುಕ್ತವಾಗಿದೆ. ನಿಜ, ಆದರೆ ಕೊಟ್ಟಂತೆ ಕಾಣಿಸುತ್ತ ಸಹಜವಾಗೇ ಹೊರಗಿಡುವುದೂ ಜೊತೆಗೇ ಜರುಗುತ್ತಿದೆ. ಏಕರೂಪದ ಶಿಕ್ಷಣ ಪದ್ಧತಿ ಇಲ್ಲದೆ, ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಿದೆ, ಕಡ್ಡಾಯ ಶಿಕ್ಷಣದಲ್ಲಿ ಕಡ್ಡಾಯ ಇಲ್ಲದೆ ಮುಖ್ಯವಾಗಿ ಗ್ರಾಮೀಣ ಭಾರತವು ಸಹಜ ಎಂಬಂತೆ ಹೊರ ಹಾಕಲ್ಪಡುತ್ತಿದೆ. ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಆಧುನಿಕ ಪ್ರಜ್ಞೆಯನ್ನು ಶಿಕ್ಷಣ ಕೊಡಬಾರದೆನ್ನುವ ಸನಾತನ ಸುಪ್ತ ಪ್ರಜ್ಞೆಯೂ ನಿಯಂತ್ರಿಸುತ್ತಿರುವುದರ ಪರಿಣಾಮದಿಂದ ಇದಾಗುತ್ತಿರಬಹುದೇನೊ. ಇಲ್ಲೂ ತಾರತಮ್ಯವೇ. ಇದಕ್ಕೆ ನಾವು ಬೆಚ್ಚುತ್ತಿಲ್ಲ, ಬೆದರುತ್ತಿಲ್ಲ. ಮೊದಲು ಶಿಕ್ಷಣ ಕ್ಷೇತ್ರದಲ್ಲಿ ನಾವು ಎಚ್ಚೆತ್ತುಕೊಂಡು ಮನುಷ್ಯರಾದರೆ ಉಳಿದುದೆಲ್ಲಾ ತಂತಾನೆ ಕಾಣಬಹುದೇನೋ.

ಭಾರತದ ಇಂದಿನ ಸ್ಥಿತಿಗೆ ಒಂದು ಚಿತ್ರಣ ಕೊಟ್ಟು ಮುಗಿಸುತ್ತೇನೆ. ತುಂಬಾ ಹಿಂದೆ ಹಳ್ಳಿಯೊಂದರಲ್ಲಿ ದಲಿತರಿಗೆ ಪ್ರವೇಶವಿಲ್ಲದ ಕಾರಣಕ್ಕೆ ಗಲಾಟೆಯಾಗಿ ಅಲ್ಲಿಗೆ ಹೋಗಿದ್ದೆವು. ಹೋಗಿ ನೋಡಿದರೆ ಆ ಹೋಟಲ್ ಅಂದರೆ ಜಗಲಿ ಮೇಲೆ ತೆಂಗಿನ ಗರಿ ಕಟ್ಟಿದ ಒಂದು ಕತ್ತಲು ತುಂಬಿದ ನೆರಕೆಯಾಗಿತ್ತು. ಅಲ್ಲಿ ನೊಣಗಳ ಸಾಮ್ರಾಜ್ಯವಿತ್ತು. ಬಚ್ಚಲು ಪಕ್ಕದಲ್ಲೇ ಹರಿಯುತ್ತ ಮೂಗು ಮುಚ್ಚಿಕೊಂಡು ತಿನ್ನಬೇಕಿತ್ತು. ಈ ಹೋಟೆಲ್ ಪ್ರವೇಶಕ್ಕೆ ದಲಿತರು ಹಾತೊರೆಯುತ್ತಿದ್ದರು. ಆ ದೃಶ್ಯ ನೋಡಿದ ನನ್ನ ಜೊತೆಗಿದ್ದ ಶ್ರೀಕೃಷ್ಣ ಆಲನಹಳ್ಳಿ ಅಯ್ಯೋ ಮಾದೇವ, ಇಲ್ಲಿ ದಲಿತರು ಏನನ್ನೂ ತಿನ್ನದಿದ್ದರೇನೇ ಆರೋಗ್ಯವಲ್ಲವೆ?' ಎಂದಿದ್ದರು. ಅದಕ್ಕೆ ನಾನು 'ಪ್ರವೇಶ ಕೇಳುತ್ತಿರುವುದು ಮನಸ್ಸಿನ ಒಳಕ್ಕೆ' ಎಂದಿದೆ.

ಭಾರತದ ಸ್ಥಿತಿಯೂ ಹೆಚ್ಚುಕಮ್ಮಿ ಆ ಹೊಟೇಲ್‌ನ ಕತೆಯಂತೆ ಇದೆ. ಇಲ್ಲಿ ಕೊಳಕುತನವಿದೆ. ಅನಾರೋಗ್ಯವಿದೆ. ಬಡತನವಿದೆ. ಅಜ್ಞಾನವು ತುಂಬಿದೆ. ಸಾಲದೆಂಬಂತೆ, ಭಾರತದ ಮೇಲೆ ದಾಳಿ ಮಾಡಿ ಸಂಪತ್ತು ದೋಚಿಕೊಂಡು ಹೋಗುತ್ತಿದ್ದ ಆ ದಾಳಿಕೋರರು ಆ ಕಾಲಮಾನದಲ್ಲಿ ಏನಾದರೂ ಹೆಚ್ಚೂ ಕಮ್ಮಿ ಮಾಡಿ ಹುಟ್ಟಿದ ಸಂತಾನವೇನೊ ಎಂಬಂತೆ ಸೆಜ್ (sez), ರಿಯಲ್ ಎಸ್ಟೇಟ್ ಹೆಸರಲ್ಲಿ ಭೂಮಿಯ ಹೊರ ಮೈಯನ್ನೂ ಮತ್ತು ಗಣಿಗಾರಿಕೆ ಹೆಸರಿಲ್ಲಿ ಭೂಮಿಯ ಒಳ ಮೈಯನ್ನೂ ದೋಚುತ್ತಿದ್ದಾರೆ. ಈ ನವ ದಾಳಿಕೋರರು ಮತದಾರರನ್ನೂ ಶಾಸಕರನ್ನೂ ಕೊಂಡುಕೊಳ್ಳಬಹುದಾದ ವಸ್ತುವಾಗಿಸಿ ಬಿಟ್ಟದ್ದಾರೆ. ಈಗ ಗಣತಂತ್ರ ವ್ಯವಸ್ಥೆಗೇ ಗಂಡಾಂತರ ಎದುರಾಗಿದೆ. ಇಂಥ ಭೀಕರ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಭಾರತವು ಸ್ವಾತಂತ್ರ್ಯ ಪಡೆದ ನಂತರ ರಾಜರ ಆಳ್ವಿಕೆ ಕೊನೆಗೊಳಿಸಿದ್ದು ವಯಸ್ಕರ ಮತದಾನ ಪದ್ಧತಿ ತಂದಿದ್ದು, ತನ್ನ ಮಿತಿಗಳೊಂದಿಗೆ ಶಿಕ್ಷಣವನ್ನು ಸರ್ವರಿಗೂ ಮುಕ್ತಗೊಳಿಸಿದ್ದು, ಭೂಸುಧಾರಣೆ, ಮಿಸಲಾತಿ ಇತ್ಯಾದಿ ಈ ನೆಲದಲ್ಲಿ ಸಂಭವಿಸಿರುವುದು ಸಾಮಾನ್ಯ ಸಂಗತಿಗಳೇನಲ್ಲ. ಆದರೆ ಭಾರತದಲ್ಲಿ ಬುದ್ಧ, ವಚನಕಾರರ ಮಹೋನ್ನತ ಪರಂಪರೆಯ ಬೆಳಕೂ ಇದೆ. ಅವರು ಉಸಿತಾಡಿದ ಗಾಳಿ ಅವರಿಟ್ಟ ಹೆಜ್ಜೆಯ ಗುರುತುಗಳೂ ಇಲ್ಲವೆ. ಆ ಹೆಜ್ಜೆಗಳನ್ನು ಗುರುತಿಸಿ ನಾವು ಹೆಜ್ಜೆ ಇಟ್ಟರೆ ಆ ಹವಾದಲ್ಲಿ ಆಗ ಸಂವಿಧಾನದ ಆಸೆಗಳು ಕೈಗೂಡಲೂಬಹುದು.

ಪ್ರಜಾವಾಣಿ –ದಿ. 15-3-2010

ಬಸವ ಜಯಂತಿ ಆಚರಣೆ - ನಮ್ಮ ಕರ್ತವ್ಯ

ವಿಶ್ವಗುರು ಬಸವಣ್ಣನವರ ಜಯಂತಿಯು ನಮ್ಮ ಸರ್ವಶ್ರೇಷ್ಠ ಪವಿತ್ರ ಹಬ್ಬ, ಲಿಂಗಾಯತರು ಮತ್ತು ಬಸವಾಯತರು ಅಭಿಮಾನ, ಉತ್ಸಾಹ, ಸಂಭ್ರಮಗಳಿಂದ ಆಚರಿಸಬೇಕಾದ ಹಬ್ಬ. ಸಾರ್ವಜನಿಕವಾಗಿ ಬಸವ ಮಂಟಪಗಳಲ್ಲಿ, ಬಸವ ಧರ್ಮದ ಸಂಘ-ಸಂಸ್ಥೆಗಳಲ್ಲಿ ತೊಟ್ಟಿಲಿಟ್ಟು ಬಸವ ಜೋಗುಳ ಹಾಡಿ ತೊಟ್ಟಿಲು ತೂಗಿ ಸಂಭ್ರಮಿಸಬೇಕು. ಜೊತೆಗೆ ತಮ್ಮ ಮನೆಗಳಲ್ಲಿ ನಡುಮನೆಯಲ್ಲಿ ಮಂಟಪ ಕಟ್ಟಿ ಅಲಂಕರಿಸಿ, ದೊಡ್ಡದಾದ ಭಾವಚಿತ್ರವಿಟ್ಟು ಬಸವೇಶ್ವರ ಪೂಜಾವ್ರತ ಮಾಡಬೇಕು. ನಂತರ ತೊಟ್ಟಿಲು ಇಟ್ಟು ಚಿಕ್ಕ ಮೂರ್ತಿ ಅಥವಾ ಭಾವಚಿತ್ರವಿಟ್ಟು ತೂಗಿ, ಜೋಗುಳ ಹಾಡಿ, ನಂತರ ಆರತಿ ಮಾಡಿ ಮಹಾಮಂಗಲ ಮಾಡಬೇಕು.

1. ಪ್ರತಿ ಮಠಗಳಲ್ಲಿಯೂ ಬಸವ ಭಾವಚಿತ್ರವಿಟ್ಟು ಪೂಜಿಸಬೇಕು. ಪ್ರತಿಯೊಬ್ಬರೂ ಅಂದು ಬಸವ ಮಂಟಪಕ್ಕೆ ಹೋಗಿ, ಮಠಕ್ಕೆ ಹೋಗಿ (ಗಣಪತಿ ಹಬ್ಬದ ದಿನ ಗಣಪತಿ ದರ್ಶನ ಪಡೆದಂತೆ) ನಮ್ಮ ಧರ್ಮದ ಗಣಪತಿಯ ದರ್ಶನವನ್ನು ಪಡೆದು ಕೈಲಾದಷ್ಟು ಕಾಣಿಕೆಯನ್ನು ಸಲ್ಲಿಸಬೇಕು.

2. ಬೇರೆ ಹಬ್ಬಗಳಲ್ಲಿ ಹೊಸ ಬಟ್ಟೆ ಉಡದಿದ್ದರಷ್ಟೆ ನಮ್ಮ ಸರ್ವ ಶ್ರೇಷ್ಠ ಹಬ್ಬ ಬಸವ ಜಯಂತಿಯಂದು ಹೊಸಬಟ್ಟೆ ಉಡಬೇಕು. ಬಿಳಿಯ ಬಟ್ಟೆಗಳನ್ನು ಕೊಂಡು ಬಸವ ಜಯಂತಿಯಂದು ಉಡಬೇಕು.

3. ತಾವಷ್ಟೇ ಹೊಸಬಟ್ಟೆ ಉಡುವುದಷ್ಟೇ ಅಲ್ಲ ಬಡವರು, ಮನೆಯ ಕೆಲಸಗಾರರು ಮುಂತಾದವರಿಗೆ ತಮಗೆ ಎಷ್ಟು ಸಾಧ್ಯವೋ ಅಷ್ಟು ಬಸವ ಜಯಂತಿಗೂ ಮೊದಲು ಕೊಟ್ಟು ಬಸವ ಜಯಂತಿಯಂದು ಉಡಲು ತಿಳಿಸಬೇಕು.

4. ಪ್ರತಿ ಊರಲ್ಲಿ ಅನ್ನದಾಸೋಹ ಜರುಗಬೇಕು. ಸಿಖ್ಖರು ಗುರು ನಾನಕ, ಗುರು ಗೋವಿಂದ ಸಿಂಗ್ ಮುಂತಾದವರ ಜಯಂತಿಯಂದು ದೆಹಲಿ ಮುಂತಾದ ನಗರಗಳಲ್ಲಿ ಶಾಮಿಯಾನಾ ಟೆಂಟ್ ಹಾಕಿ ಇಡೀ ದಿನ ಅನ್ನದಾಸೋಹ ನಡೆಸುತ್ತಾರೆ. ಅದೇ ರೀತಿ ನಮ್ಮವರು (ರಾಷ್ಟ್ರೀಯ ಬಸವ ದಳದವರು) ಮುಖ್ಯ ರಸ್ತೆಯಲ್ಲಿ, ಮುಖ್ಯ ಸರ್ಕಲ್‌ದಲ್ಲಿ ಶಾಮಿಯಾನಾ ಹಾಕಿ, ಬಸವ ಜಯಂತಿಯ ಬ್ಯಾನರ್ ಕಟ್ಟಿ ಅಡಿಗೆಯನ್ನು ಬೇರೆಡೆ ಮಾಡಿಸಿ ತಂದು ಅಲ್ಲಿ ವಿತರಣೆ ಮಾಡಬಹುದು. ಇದರಿಂದ ನಮ್ಮ ಧರ್ಮಗುರುವಿನ ಬಗ್ಗೆ ಬಹಳ ಭಕ್ತಿಯು ಹುಟ್ಟುವುದು. ಶರಣರು ದಾಸೋಹಕ್ಕಾಗಿ ಉದಾರವಾದ ಕಾಣಿಕೆ ಸಲ್ಲಿಸಬೇಕು.

5. ಯಾರಿಗೆ ಸಾಧ್ಯವೋ ಅವರು (ರಾಷ್ಟ್ರೀಯ ಬಸವ ದಳ) ಬೆಳಗಿನ ಜಾವ ಇಂದು ಬಸವ ಜಯಂತಿ ಎಂದು ಜನರನ್ನು ಎಚ್ಚರಿಸಲು ಊರೊಳಗೆ ಬಸವ ಭಾವಚಿತ್ರ ಧ್ವಜ, ವಚನ ಸಾಹಿತ್ಯ ಹಿಡಿದುಕೊಂಡು "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಂದು ಮಂತ್ರ ಘೋಷ ಮಾಡುತ್ತ ನಗರ ಪ್ರದಕ್ಷಿಣೆ (ಪಥ ಸಂಚಲನ) ಮಾಡಬೇಕು.

6. ಅಂದೇ 'ಗೃಹ ಪ್ರವೇಶ, ಮದುವೆ, ಶಂಕುಸ್ಥಾಪನೆ, ಬಾಗಿಲು ಚೌಕಟ್ಟು ಇಡುವಿಕೆ ಇಂಥ ಖಾಸಗಿ ಕಾರ್ಯಕ್ರಮ ಇಡದೆ ಎಲ್ಲರೂ ಸಾರ್ವತ್ರಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪರಿಪಾಠ ಬೆಳೆಸಿಕೊಳ್ಳಬೇಕು.

7. ಬಸವ ಜಯಂತಿಯ ಸಂಜೆ ಮನೆಯ ಮುಂಭಾಗದಲ್ಲಿ ದೀಪಗಳನ್ನು ಹಚ್ಚಿಡಬೇಕು. ಲೈಟಿನ ಸರಗಳನ್ನು ತೂಗಿ ಬಿಡಬೇಕು.

8. ಲಿಂಗಾಯತರು/ ಬಸವಾಯತರು ಮನೆ/ಮಠಗಳ ಮೇಲೆ ಷಟ್ಕೋನ ಬಸವ ಧ್ವಜವನ್ನು ಹಾರಿಸಬೇಕು. ಯಾವಾಗಲೂ ಹಾರಿಸುವವರು ಅಂದು ಹಳೆಯದನ್ನು ತೆಗೆದು, ಹೊಸದನ್ನು ಹಾರಿಸಬೇಕು.

ಶುಭಹಾರೈಕೆಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ




ದಿ.13-3-2010, ಬೆಂಗಳೂರಲ್ಲಿ ಪೂಜ್ಯ ಮಾತಾಜಿಯ ವರ್ಧಂತಿ ಆಚರಣೆ









ವರ್ಧಂತಿಯಂದು ಭಾಗವಹಿಸಿದ ಅತಿಥಿಗಳು



ದಿ.21-3-2010 ಚಿತ್ರದುರ್ಗದಲ್ಲಿ ಅಭಿನಂದನ ಸಮಾರಂಭ ಉದ್ಘಾಟನೆ





ಚಿತ್ರದುರ್ಗದ ಪ್ರಮುಖ ರಸ್ತೆಯಲ್ಲಿ ಪೂಜ್ಯ ಮಾತಾದ್ವಯರ ಮೆರವಣಿಗೆ



CPMG/KA/BGW-50WPP R.17 2009-2011 , I.N.R.No
No pages 32 Reg. No. 19988/70